# ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ - 2014



# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 32
ಸಂಚಿಕೆ - 3
ಡಿಸೆಂಬರ್ - 2014

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ತೀರ್ಥರಾಜಪುರ ಪ್ರಕರಣ | **ವತ್ಸಲ** | 3 |
| ಟ್ರಿಕ್ಕಾರ್ ಟ್ರೀಟಾಯ..... | **ವಾಣೀ ಸುರೇಶ್** | 9 |
| ಸೀರಿಯಸ್ ಗಣಿತಜ್ಞರ... | **ರೋಹಿತ್ ಭಟ್** | 14 |
| ಮುತ್ತಿನ ಮಾತು | **ಭೂಮಿತಾಯಿ** | 18 |
| ಕರ್ನಾಟಕ ವೈಭಯ! | **ಗಣೇಶ ಹೆಗ್ಗಡೆ** | 22 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 25 |
| ಕದ್ದು ಕೇಳಿದ್ದು | **ಸಿ.ಆರ್. ಸತ್ಯ** | 26 |
| ತುಂತುರು | **ದಂನಾಳ** | 30 |
| ಸನ್ಮಾನ ದುಮ್ಮಾನ | **ಬೇಲೂರು ರಾಮಮೂರ್ತಿ** | 31 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 35 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

*ಮುದ್ರಣ :* ರವಿ ಗ್ರಾಫಿಕ್ಸ್ - *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



‘ಡೀರೇಲ್’ ಆದರೂ ಸದಾನಂದರ ಮುಗುಳ್ನಗೆ ಮಾಸಿಲ್ಲ!!

★★★

ವೃತ್ತಿಪರ ಕೋರ್ಸ್‌ಗಳಿಗೆ ಏಕರೂಪ ಪ್ರವೇಶ ಪರೀಕ್ಷೆ – ಸುದ್ದಿ

*● ಏಕರೂಪ ಹಗರಣ ?!*

★★★

ಕರ್ನಾಟಕದ ಎರಡನೆಯ ‘ರಾಹುಲ್’ಗೆ ಅಪರಂಜಿಯ ಶುಭಾಶಯಗಳು !!

★★★

ನಾಯಕತ್ವ ಒಪ್ಪಿಕೊಳ್ಳಿ; ರಾಹುಲ್‌ಗೆ ಒತ್ತಾಯ – ಪತ್ರಿಕೆ

*● ‘ಭಾರತದ ಹ್ಯಾಮ್ಲೆಟ್’ ಎನ್ನಬಹುದೇ ?!*

★★★

ಆಡಳಿತದಲ್ಲಿ ಹತ್ತು ಅಂಶಗಳ ಸೂತ್ರ – ವೆಂಕಯ್ಯ ನಾಯ್ಡು

*● ಟೆನ್ ಕಮಾಂಡ್‌ಮೆಂಟ್ಸ್ ?!*

★★★

ಸಿಂಘ್ವಿ ಅವರ ದಾಖಲೆಗಳನ್ನು ಗೆದ್ದಲು ತಿಂದಿವೆ – ಪತ್ರಿಕೆ

*● ಅವರಂತೂ ‘ಗೆದ್ದ’ರು !!*

★★★

‘ರೇಲ್ವೇ ಪರೀಕ್ಷೆಯಲ್ಲಿ ಕನ್ನಡದ ಕಗ್ಗೊಲೆ’ – ಪತ್ರಿಕೆ

*● ಭಾಷೆಯೇ ಹಳಿತಪ್ಪಿರುವಂತಿದೆ !!*

★★★

‘ವಿದ್ಯಾಲಯಗಳಲ್ಲಿ ಅಕ್ರಮಗಳು’ ಎಂಬ ವಿಷಯವನ್ನು ಆರಿಸಿಕೊಂಡು ಒಬ್ಬರು ಪಿಎಚ್.ಡಿ. ಮಾಡುತ್ತಿದ್ದಾರಂತೆ !!

★★★



# ತೀರ್ಥರಾಜಪುರ ಪ್ರಕರಣ

**- ವತ್ಸಸ**

**ನ**ಮ್ಮ ರೋಹಿತ್ ಶರ್ಮ ಶ್ರೀಲಂಕದ ಬ್ಲೈಂಡ್ ಸ್ಕೂಲಿನ ಟೀಮಿನ ಮೇಲೆ ಇನ್ನೂರ ಅರವತ್ತನಾಲ್ಕು ರನ್ನುಗಳನ್ನು ಚೆಚ್ಚಿದನಲ್ಲ ಅವತ್ತಿನ ದಿನ ಸಂಜೆ, ಶರಲೇಖ ಮತ್ತು ನಾನು, ನಮ್ಮ ಮಾನ್ಯ ಪ್ರಧಾನಿಯವರ ಆಸ್ಟ್ರೇಲಿಯಾ ಪ್ರವಾಸದ ವರದಿಯನ್ನು ಟಿ.ವಿ.ಯಲ್ಲಿ ನೋಡುತ್ತಿದ್ದೆವು. ಒಮ್ಮೆಲೇ ಶರಲೇಖ ನನ್ನ ಮುಂದೊಂದು ಸವಾಲನ್ನು ಒಡ್ಡಿದ. ''ಮೇ ಹದಿನಾರರಂದು ಮೋದಿ ಬದಲು ರಾಹುಲ್ ಪಟ್ಟಕ್ಕೆ ಬಂದಿದ್ದರೆ ಈ ವಿದೇಶೀ ನಾಯಕರ ಜೊತೆ ಆತ ಯಾವ ವಿಷಯಗಳನ್ನು ಚರ್ಚಿಸುತ್ತಿದ್ದ ಊಹಿಸಬಲ್ಲೆಯಾ?'' ಅಂತ ಶರಲೇಖ ಕೇಳಿದ. ನಾನು, ''ಅದೇನು ಬಹು ಸುಲಭ, ಅಮೆರಿಕಾದಲ್ಲಿ ಮಹಿಳಾ ಸಬಲೀಕರಣ ಮತ್ತು ಚೈನಾದಲ್ಲಿ ಆರ್.ಟಿ.ಐ.ನ ಪ್ರಾಮುಖ್ಯತೆ ಬಗ್ಗೆ ಬಹು ತಮಾಷೆಯಾಗಿ ಮಾತನಾಡಿ ಇದ್ದವರೆಲ್ಲಾ ಬಿದ್ದು ಬಿದ್ದು ನಗುವಂತೆ ಮಾಡಿ ಭಾರತ ಒಂದು ಅತ್ಯುತ್ತಮ ಹಾಸ್ಯಪ್ರಜ್ಞೆಯ ರಾಷ್ಟ್ರ ಎಂಬ ಹೆಗ್ಗಳಿಕೆಯನ್ನು ದೇಶಕ್ಕೆ ತರುತ್ತಿದ್ದ'' ಎಂದೆ. ಶರಲೇಖ ಉತ್ತರಿಸುವಷ್ಟರಲ್ಲಿ ಹೊರಬಾಗಿಲ ಕರೆಗಂಟೆ ಟ್ರಿನ್‌ಗುಟ್ಟಿತು. ಶರಲೇಖನೇ ಹೋಗಿ ಬಾಗಿಲು ತೆಗೆದ.

ಇನ್ಸ್‌ಪೆಕ್ಟರ್ ಭುವನ್ ಒಳಗೆ ಬಂದ. ದೊಡ್ಡ ಜಾತ್ರೆ ಪ್ರಕರಣದಲ್ಲಿ ಪರಿಚಯವಾಗಿದ್ದ ಭುವನ್ ಕಳೆದ ಹಲವು ತಿಂಗಳುಗಳಲ್ಲಿ ಶರಲೇಖನಿಂದ ಪತ್ತೇದಾರಿ ವಿಜ್ಞಾನದ ಬಗ್ಗೆ ಹೆಚ್ಚು ಕಲಿಯಲು ಉತ್ಸಾಹ ತೋರಿಸಿದ್ದರಿಂದ ಅವನೊಂದಿಗೆ ನಮ್ಮಿಬ್ಬರಿಗೂ ಆಪ್ತಭಾವ ಮೊಳೆತಿತ್ತು. ಹಾಗಾಗಿ ಭುವನ್ ನೇರವಾಗಿ ವಿಷಯಕ್ಕೆ ಬಂದ.

''ಶರಲೇಖ ಸರ್, ನಾನು ಈಗ ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ನೋಡುತ್ತಿದ್ದೇನೆ. ಒಂದು ಕುತೂಹಲ ಮೂಡಿಸುವ ಸಂಗತಿ ನಡೆದಿರುವುದರಿಂದ ಅದರ ಬಗ್ಗೆ ನಿಮ್ಮ ಸಲಹೆ ಕೇಳಲು ಬಂದಿದ್ದೇನೆ. ಶಿವಮೊಗ್ಗೆಯಿಂದ ಜೀಪಿನಲ್ಲಿ ನೇರವಾಗಿ ಬಂದಿರುವುದರಿಂದ ಬಾಯೆಲ್ಲಾ ಒಣಗಿದೆ. ಸಲಹೆ ಜೊತೆ ಒಂದು ಕಪ್ ಕಾಫಿ ಸಿಗಬಹುದೇ?'' ಅಂತ ಯಾವ ಸಂಕೋಚವೂ ಇಲ್ಲದೇ ಭುವನ್ ಕೇಳಿದ.

ಒಳಗಿನಿಂದ ಸರೋಜಮ್ಮ ''ಇದೋ ಈಗಲೇ ತಂದೆ'' ಎಂದ ನಂತರ ಭುವನ್ ತನ್ನ ಸಮಸ್ಯೆಯನ್ನು ನಮ್ಮ ಮುಂದೆ ಬಿಚ್ಚಿಡಲು ಪ್ರಾರಂಭಿಸಿದ.

''ಆದಷ್ಟು ಸಂಕ್ಷಿಪ್ತವಾಗಿ, ಸಾಧ್ಯವಾದರೆ ಟೆಲಿಗ್ರಾಫಿಕ್ ಭಾಷೆಯಲ್ಲಿ, ಆದರೆ ಯಾವ ಅಂಶವನ್ನೂ ಬಿಡದೆ ವಿಷಯ ನಿರೂಪಣೆ ಮಾಡಬೇಕು ಅಂತ ನೀವೇ ಹೇಳಿಕೊಟ್ಟಿದ್ದೀರ. ಹಾಗೇ ಮಾಡಲು ಪ್ರಯತ್ನಿಸುತ್ತೀನಿ. ತೀರ್ಥಹಳ್ಳಿಯಲ್ಲಿ ಇಬ್ಬರು ಸಹೋದರರು. ಹಿರಿಯವ ತಮ್ಮೇಗೌಡರು. ಕಿರಿಯವ ಜಯಶಂಕರ್. ತಮ್ಮೇಗೌಡರು ಭಾರೀ ಶ್ರೀಮಂತರು, ಮಕ್ಕಳಿಲ್ಲ. ಜಯಶಂಕರ್‌ಗೆ ಮದುವೆಯೇ ಆಗಿಲ್ಲ. ತಮ್ಮೇಗೌಡರು ತಮ್ಮ ಜಮೀನನ್ನು ನೋಡಿಕೊಂಡು

ತೀರ್ಥಹಳ್ಳಿಯಲ್ಲೇ ವಾಸ. ಜಯಶಂಕರ್ ಬಹು ಮೇಧಾವಿ. ಕೆಮಿಸ್ಟ್ರಿಯಲ್ಲಿ ಡಾಕ್ಟರೇಟ್ ಪಡೆದು ಅಮೆರಿಕಾದಲ್ಲಿ ಬಹುಕಾಲ ಇದ್ದು ಈಗ ತಮ್ಮ ಸ್ವಂತ ಊರಿಗೆ ಹಿಂತಿರುಗಿ ತಮ್ಮ ಫಾರ್ಮ್‌ಹೌಸಿನಲ್ಲಿ ಇದ್ದಾರೆ. ಅಣ್ಣ ತಮ್ಮ ಬಹು ಅನ್ಯೋನ್ಯ. ಮೊನ್ನೆ ಎರಡು ವಿಷಾದದ ಘಟನೆಗಳು ಒಂದಾದಮೇಲೊಂದು ಈ ಸಹೋದರರ ಮೇಲೆ ಎರಗಿದವು. ಮೊನ್ನೆ ಅಂದರೆ ಹದಿನೇಳರ ಸೋಮವಾರ ತಮ್ಮೇಗೌಡರು ಊರಿನಲ್ಲಿರುವ ಅನುರಾಧಾ ನರ್ಸಿಂಗ್ ಹೋಮಿನಲ್ಲಿ ಹೃದಯಾಘಾತದಿಂದ ನಿಧನರಾದರು. ಸುಮಾರು ಅದೇ ಸಮಯಕ್ಕೇ ಜಯಶಂಕರ್ ತಮ್ಮ ಫಾರ್ಮ್‌ಹೌಸಿನಲ್ಲಿ ಯಾವುದೋ ರಾಸಾಯನಿಕ ಪ್ರಯೋಗ ನಡೆಸುತ್ತಿದ್ದಾಗ ಒಂದು ಆಸ್ಫೋಟನೆ ಆಗಿ ಅಸುನೀಗಿದರು. ಎರಡು ಘಟನೆಗಳಲ್ಲೂ ಯಾವ ದುರುಳರ ಕೈವಾಡವೂ ಇಲ್ಲ ಎಂಬುದನ್ನು ನಾನೇ ಖಾತರಿಪಡಿಸಿಕೊಂಡಿದ್ದೇನೆ. ಒಂದು ಡಾಕ್ಟರ ಸನ್ನಿಧಿಯಲ್ಲೇ ನಡೆದ ಸಾವಾದರೆ ಇನ್ನೊಂದು ಆಕಸ್ಮಿಕ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ'' ಇಷ್ಟು ಹಿನ್ನೆಲೆ ಮಾಹಿತಿ.

ಈಗ ಸಮಸ್ಯೆಯ ವಿಷಯ ''ತಮ್ಮೇಗೌಡರು ಒಂದು ಉಯಿಲನ್ನು ಬರೆದು ಅದನ್ನು ನಿರ್ವಹಿಸುವುದನ್ನು ಊರಿನಲ್ಲಿರುವ ಒಂದು ರಾಷ್ಟ್ರೀಕೃತ ಬ್ಯಾಂಕಿಗೆ ವಹಿಸಿದ್ದರು. ಉಯಿಲಿನಲ್ಲಿ ತಮ್ಮ ಹೇರಳವಾದ ಆಸ್ತಿಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ತನ್ನ ತಮ್ಮನಿಗೆ ಕೊಡಬೇಕು. ಒಂದುವೇಳೆ ತಮ್ಮ ತಮಗಿಂತ ಮೊದಲು ನಿಧನರಾಗಿದ್ದರೆ ಆ ಮೊಬಲಗನ್ನು ಊರಿನ ಒಂದು ಖ್ಯಾತ ವಿದ್ಯಾಸಂಸ್ಥೆಗೆ ದೇಣಿಗೆ ನೀಡಬೇಕು ಎಂದು ಬರೆದಿದ್ದರು. ಎರಡು ಮರಣಗಳೂ ಸುಮಾರು ಒಂದೇ ವೇಳೆ ನಡೆದಿರುವುದರಿಂದ ತಮ್ಮ ಅಣ್ಣನಿಗಿಂತ ಮೊದಲು ಅಸುನೀಗಿದನೋ, ಅನಂತರವೋ ಎಂಬ ಅಂಶ ಬಹು ಪ್ರಾಮುಖ್ಯವಾಗಿಬಿಟ್ಟಿದೆ. ಜಯಶಂಕರ್ ತಂಗಿಯ ಮಗ ಚೇತನ್ ಮತ್ತು ವಿದ್ಯಾಸಂಸ್ಥೆಯ ಟ್ರಸ್ಟಿಗಳು ಇಬ್ಬರೂ ಬ್ಯಾಂಕಿನ ಮುಂದೆ ತಮ್ಮ ಹಕ್ಕನ್ನು ಮಂಡಿಸಿದ್ದಾರೆ. ಬ್ಯಾಂಕಿನವರು ಸಹಜವಾಗಿ ನಮ್ಮ ಸಲಹೆಯ ಮೇಲೆ ನಿರ್ಧರಿಸುವುದಾಗಿ ಹೇಳಿದ್ದಾರೆ. ಅಣ್ಣನ ಸಾವನ್ನೇನೋ ನರ್ಸಿಂಗ್ ಹೋಮಿನಲ್ಲಿ ಸ್ಪಷ್ಟವಾಗಿ ದಾಖಲಿಸಿದ್ದಾರೆ. ತಮ್ಮನ ಸಾವಿನ ವೇಳೆಗೆ ಚೇತನ್ ಹೇಳಿಕೆಯಲ್ಲದೇ ಬೇರೆ ಏನೂ ಪುರಾವೆ ಇಲ್ಲ. ಜಯಶಂಕರ್‌ನ ಸಾವಿನ ನಿಖರ ಸಮಯವನ್ನು ಸ್ಪಷ್ಟವಾಗಿ ಸಾಬೀತುಪಡಿಸುವುದಕ್ಕೆ ಆದರೆ ಸಮಸ್ಯೆ ಬಗೆಹರಿಯುತ್ತದೆ. ಇದಕ್ಕೆ ನಿಮ್ಮ ಸಹಾಯ ಬೇಕು'' ಅಂದ ಭುವನ್.

ಭುವನ್ ತನ್ನ ಸಮಸ್ಯೆಯನ್ನು ನಮ್ಮ ಮುಂದಿಟ್ಟ ರೀತಿ ನನಗಂತೂ ಬಹುವಾಗಿ ಇಂಪ್ರೆಸ್ ಆಯಿತು. ಶರಲೇಖ ಯಾವ ಮರುಪ್ರಶ್ನೆಯನ್ನೂ ಕೇಳದೆ ಮಾರನೆಯ ದಿನವೇ ಭುವನ್ ನೊಂದಿಗೆ ತೀರ್ಥಹಳ್ಳಿಗೆ ಹೋಗುವುದಕ್ಕೆ ಒಪ್ಪಿದ. ನಾನು, ''ಭುವನ್ ಈ ರಾತ್ರಿಯಲ್ಲಿ ಇನ್ನೆಲ್ಲಿ ಹೋಗ್ತೀರ. ಇಲ್ಲೇ ಇದ್ದು ಬೆಳಗ್ಗೆ ಎಲ್ಲರೂ ಒಟ್ಟಿಗೆ ತೀರ್ಥಹಳ್ಳಿಗೆ ಹೊರಡೋಣ'' ಎಂಬ ಆಹ್ವಾನವನ್ನು ಮನ್ನಿಸಿ ಭುವನ್ ನಮ್ಮಲ್ಲಿಯೇ ಉಳಿದ. ಊಟವಾದ ನಂತರ ನಾನು ತೀರ್ಥಹಳ್ಳಿಯ ಮೇಲೆ ಸ್ವಲ್ಪ ಮಾಹಿತಿ ಸಂಗ್ರಹಿಸಿದೆ. ತೀರ್ಥಹಳ್ಳಿಯ ಮೂಲ ಹೆಸರು ತೀರ್ಥರಾಜಪುರ. ಅಂದರೆ ತೀರ್ಥಗಳ ರಾಜ. ಪರಶುರಾಮ ತೀರ್ಥ, ಚಕ್ರ ತೀರ್ಥ, ಗಧಾ

ತೀರ್ಥ, ಶಂಖ ತೀರ್ಥ ಮತ್ತು ಪದ್ಮ ತೀರ್ಥಗಳೆಂಬ ಐದು ಪವಿತ್ರ ತೀರ್ಥಗಳು ಊರಿನ ಹೆಸರಿಗೆ ಕಾರಣವಂತೆ. ಈ ಊರು ತುಂಗಾನದಿಯ ತೀರದಲ್ಲಿದೆ. ತಕ್ಷಣ ನನಗೆ ''ತುಂಗಾತೀರದ ಬಲಗಡೆಯಲ್ಲಿ...'' ಸಾಲುಗಳು ನೆನಪಿಗೆ ಬಂದುವು. ಶಿವಮೊಗ್ಗ ಜಿಲ್ಲೆಯ ಅಫಿಷಿಯಲ್ ವೆಬ್‌ಸೈಟು ಬಹು ಉಪಯೋಗಕರ ಮಾಹಿತಿಗಳನ್ನು ಹೊಂದಿತ್ತು.

ಬೆಳಗ್ಗೆ ಹೊರಟು ತೀರ್ಥಹಳ್ಳಿಯ ಆಸುಪಾಸನ್ನು ಸೇರಿದಾಗ ಮಧ್ಯಾಹ್ನ ಒಂದು ಗಂಟೆ. ತುಂಗಾನದಿಯನ್ನು ದಾಟಲು ನಿರ್ಮಿಸಿರುವ ಕಮಾನು ಸೇತುವೆ ಬಿಸಿಲಿನಲ್ಲಿ ಬೆಳ್ಳಗೆ ಹೊಳೆಯುತ್ತಿತ್ತು. ಈ ಸೇತುವೆಯನ್ನು ದಾಟಿದ ನಂತರ ಊರಿನ ಮನೆಗಳು ಕಾಣಿಸಿಕೊಂಡವು. ನಾವು ನೇರವಾಗಿ ಪೋಲಿಸ್ ಸ್ಟೇಷನ್ನಿಗೆ ಹೋಗಿ ಸೇರಿದೆವು. ಶರಲೇಖ ಮೊದಲು ತಮ್ಮೇಗೌಡರ ಮನೆಗೆ ಹೋಗಿ ಅವರ ಪತ್ನಿಯೊಂದಿಗೆ ಮಾತನಾಡುವ ಇಚ್ಛೆಯನ್ನು ವ್ಯಕ್ತಪಡಿಸಿದ. ನೇರವಾಗಿ ತಮ್ಮೇಗೌಡರ ಮನೆಗೆ ಹೋದೆವು. ಅವರ ಪತ್ನಿ ದುಃಖದಲ್ಲಿದ್ದರೂ ನಮ್ಮನ್ನು ನೋಡಲು ಒಪ್ಪಿದರು. ಶರಲೇಖ ಅವರನ್ನು ಕುರಿತು, ''ತಮ್ಮ ಈ ಅಳಲಿನ ಸಮಯದಲ್ಲಿ ತೊಂದರೆ ಕೊಡುತ್ತಿರುವುದಕ್ಕೆ ಕ್ಷಮೆ ಇರಲಿ. ನನ್ನದು ಒಂದೇ ಪ್ರಶ್ನೆ. ತಮ್ಮೇಗೌಡರು ತಮ್ಮ ಆಸ್ತಿಯ ಒಂದು ಭಾಗವನ್ನು ವಿದ್ಯಾಸಂಸ್ಥೆಗೆ ಅಥವಾ ತನ್ನ ತಮ್ಮ ಬದುಕಿದ್ದರೆ ಆತನಿಗೆ ಅಂತ ಬರೆದಿರುವುದರ ಮೂಲ ಉದ್ದೇಶವೇನಾದರೂ ತಮಗೆ ತಿಳಿದಿದೆಯೇ?'' ಅಂತ ನೇರವಾಗಿ ಕೇಳಿದ.

''ನನಗೆ ಏನೂ ತೋಚುತ್ತಿಲ್ಲ. ವಿದ್ಯಾಸಂಸ್ಥೆಯ ಏಳಿಗೆಯ ಬಗ್ಗೆ ಅವರು ಯಾವಾಗಲೂ ಮಾತನಾಡುತ್ತಿದ್ದರು. ಅಷ್ಟೇ ಆಸಕ್ತಿಯಿಂದ ಜಯಣ್ಣ ಮಾಡುತ್ತಿದ್ದ ವೈಜ್ಞಾನಿಕ ಸಂಶೋಧನೆಗಳ ಬಗ್ಗೆಯೂ ಇವರಿಗೆ ಬಹು ಹೆಮ್ಮೆ. ಬಹುಶಃ ಆ ಹಣ ಸಂಶೋಧನೆಗೆ ಬಳಕೆಯಾಗಲಿ ಹಾಗಾಗದಿದ್ದರೆ ಮಾತ್ರ ವಿದ್ಯಾ ಸಂಸ್ಥೆಗೆ ಹಣ ಸೇರಲಿ ಎಂದು ಅವರ ಇಷ್ಟ ಇದ್ದಂತೆ ತೋರುತ್ತೆ'' ಎಂದರು ಆಕೆ.

ಅವರಿಗೆ ವಿದಾಯ ಹೇಳಿ ನಾವು ಜಯಶಂಕರ್ ಫಾರ್ಮ್‌ಗೆ ಹೋದೆವು. ವಿಶಾಲವಾದ ತೋಟದ ಮಧ್ಯೆ ಅವರ ಪ್ರಯೋಗಶಾಲೆ ಇತ್ತು. ಒಳಗಿನ ಹಜಾರದಲ್ಲಿನ ಗೋಡೆಗಳ ಬದಿಯಲ್ಲಿ ಸಾಲು ಸಾಲಾಗಿ ಪುಸ್ತಕದ ಬೀರುಗಳು. ಮಧ್ಯೆ ಇದ್ದ ವಿಶಾಲವಾದ ಮೇಜಿನ ಮೇಲೆ ಅನೇಕ ವೈಜ್ಞಾನಿಕ ಉಪಕರಣಗಳು. ಅವುಗಳೊಂದಿಗೆ ಹಲವು ವಿವಿಧ ಅಳತೆಯ ಮಾರ್ಬಲ್ ಹಲಗೆಗಳು ಮೇಜಿನ ಮೇಲಿದ್ದವು. ಚೇತನ್ ನಮ್ಮ ಜೊತೆ ಇದ್ದು ಅಲ್ಲಿನ ವಿವರಗಳನ್ನು ತಿಳಿಸುತ್ತಿದ್ದ. ''ನಮ್ಮ ಮಾವ ಕೈಗಾರಿಕಾ ಆಸ್ಫೋಟಕಗಳ ಬಗ್ಗೆ ವಿಶೇಷ ಸಂಶೋಧನೆ ನಡೆಸಿದ್ದರು. ಜಬ್ಬಲ್ಪುರದ ಮಾರ್ಬಲ್ ಗಣಿಕಾರರು ಇವರ ಸಲಹೆಯನ್ನು ಬಹುವಾಗಿ ಪಡೆಯುತ್ತಿದ್ದರು. ಅದಕ್ಕೇ ಇಲ್ಲಿ ಅನೇಕ ಮಾರ್ಬಲ್ ಹಲಗೆಗಳನ್ನು ನೀವು ನೋಡಬಹುದು'' ಅಂತ ವಿವರಿಸಿದ ಚೇತನ್.

''ಅಪಘಾತ ಹೇಗಾಯಿತು ಚೇತನ್?'' ಶರಲೇಖ ಕೇಳಿದ.

''ಅಪಘಾತ ಆದಾಗ ನಾನಿರಲಿಲ್ಲ. ಸ್ಫೋಟದ ಶಬ್ದ ಕೇಳಿ ತೋಟದ ಆಳು ನಿಂಗಪ್ಪ ಇಲ್ಲಿಗೆ ಓಡಿಬಂದ. ಸ್ಫೋಟದಿಂದ ಹೊರಹೊಮ್ಮಿದ ಒಂದು ಮಾರ್ಬಲ್ ಚೂರು ಮಾವನ ತಲೆಗೆ

ಬಿದ್ದು ಅವರು ನೆಲಕ್ಕೆ ಕುಸಿದರಂತೆ. ನಿಂಗಪ್ಪ ನನಗೆ ಫೋನ್ ಮಾಡಿದ ತಕ್ಷಣ ಇಲ್ಲಿಗೆ ಕಾರಿನಲ್ಲಿ ಬಂದೆ. ಅನಂತರ ಕಾರಿನಲ್ಲೇ ಅವರನ್ನ ಆಸ್ಪತ್ರೆಗೆ ಒಯ್ದೆವು. ಅಷ್ಟು ಹೊತ್ತಿಗಾಗಲೇ ಮಾವ ಅಸುನೀಗಿದ್ದ'' ಅಂತ ಹೇಳಿದ ಚೇತನ್.

''ನೀವು ಇಲ್ಲಿಗೆ ಬಂದಾಗ ವೇಳೆ ಎಷ್ಟಾಗಿತ್ತು ಅಂತ ಗಮನಿಸಿದ್ದೀರಾ?'' ಶರಲೇಖ ಕೇಳಿದ.

''ಖಂಡಿತವಾಗಿ. ನನಗೆ ಒಂದೂವರೆಗೆ ಒಂದು ಮೀಟಿಂಗ್ ಇತ್ತು. ಅದನ್ನು ನೆನಪಿಡುವ ಸಲುವಾಗಿ ಒಂದು ಘಂಟೆಗೆ ಅಲಾರಮ್ ಇಟ್ಟಿದ್ದೆ. ಇಲ್ಲಿ ಮಾವನನ್ನು ನೋಡಲು ಬಂದ ತಕ್ಷಣ ಅಲಾರಮ್ ಹೊಡೀತು'' ಅಂದ ಚೇತನ್.

''ನಿಂಗಪ್ಪನ ಫೋನ್ ಕರೆ ಆದ ಎಷ್ಟು ಹೊತ್ತಿಗೆ ನೀವು ಇಲ್ಲಿಗೆ ಬಂದಿರಿ?''

''ಸುಮಾರು ಹತ್ತು ನಿಮಿಷ ಆಗಿರಬಹುದು.''

''ಹಾಗಾದರೆ ನಿಮ್ಮ ಅಂದಾಜಿನ ಪ್ರಕಾರ ಸ್ಫೋಟ ಒಂದುಗಂಟೆಗೆ ಹತ್ತು ನಿಮಿಷಕ್ಕೆ ಮುಂಚೆ ಆಗಿತ್ತು ಅಂತ ಹೇಳ್ತೀರಾ?''

''ಹೌದು'' ಅಂತ ಹೇಳಿದ ಚೇತನ್.

ಶರಲೇಖ ಆ ಹಜಾರವನ್ನು ಬಹು ವಿವರವಾಗಿ ಪರಿಶೀಲಿಸಿದ. ಹೆಂಚಿನ ಮಾಡನ್ನು ಹೊಂದಿದ್ದ ಆ ಹಜಾರಕ್ಕೆ ಬಿಸಿಲು ಮಚ್ಚಿನಿಂದ ಬೆಳಕು ಬರುತ್ತಿತ್ತು. ಮೇಜಿನ ಪಕ್ಕದಲ್ಲಿದ್ದ ಬೀರುವಿನಲ್ಲಿ ಬಾಟಲುಗಳಲ್ಲಿ ಅನೇಕ ರಾಸಾಯನಿಕ ವಸ್ತುಗಳು ತುಂಬಿದ್ದವು. ಇನ್ನೊಂದು ಬೀರುವಿನಲ್ಲಿದ್ದ ಜಯಶಂಕರ್ ಬರೆದಿದ್ದ ನೋಟ್ಸ್‌ಗಳು ತುಂಬಿದ್ದವು. ಶರಲೇಖ ನಮ್ಮನ್ನು ಕುರಿತು, ''ಭುವನ್ ನನಗೆ ಇಲ್ಲಿ ಪರಿಶೀಲಿಸಲು ತುಂಬಾ ವಿಷಯಗಳಿವೆ. ನೀನು ಮತ್ತು ವತ್ಸನ ನರ್ಸಿಂಗ್ ಹೋಮಿಗೆ ಹೋಗಿ ತಮ್ಮೇಗೌಡರ ಮರಣ ದಾಖಲೆಯ ಪ್ರತಿಗಳನ್ನು ಪಡೆದು ಸ್ಟೇಷನ್ನಿಗೆ ತೆರಳಿ. ಇಲ್ಲಿ ನಾನು ಚೇತನ್ ಸಹಾಯದಿಂದ ನನ್ನ ಪರಿಶೀಲನೆ ಮುಗಿಸಿ ನಿಮ್ಮನ್ನು ಬಂದು ಸೇರುತ್ತೇನೆ'' ಎಂದ ನಂತರ ನಾನು ಭುವನ್ ಜೀಪಿನಲ್ಲಿ ಅವನೊಂದಿಗೆ ಹೊರಟೆ.

ನರ್ಸಿಂಗ್ ಹೋಮಿಗೆ ಹೋಗಿ ತಮ್ಮೇಗೌಡರ ಮರಣ ದಾಖಲೆ ಪಡೆದೆವು. ಅದರ ಪ್ರಕಾರ ಅವರ ಮರಣದ ಸಮಯ ಮಧ್ಯಾಹ್ನ ಹನ್ನೆರಡು ಗಂಟೆ ಐದು ನಿಮಿಷ ಎಂದು ನಮೂದಿಸಿತ್ತು. ಶರಲೇಖ ಸಂಜೆಯಾದರೂ ಹಿಂದಕ್ಕೆ ಬರಲಿಲ್ಲ. ಭುವನ್‌ಗೆ ಫೋನ್ ಮಾಡಿ ತಾನು ಊರಿನಲ್ಲಿನ ಕಾಲೇಜಿನ ಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರೊಂದಿಗೆ ಇರುವುದಾಗಿಯೂ ಸಂಜೆಯನ್ನು ಅವರೊಂದಿಗೇ ಕಳೆಯುವುದರಿಂದ ನಾನು ಹೊಟೇಲಿನಲ್ಲಿ ತಂಗಲು ಸೂಚಿಸಿದ. ಭುವನ್ ''ವತ್ಸನ ಸರ್ ನಮ್ಮ ಊರಿಗೆ ಬಂದಮೇಲೆ ನೀವು ನಮ್ಮ ಮನೆಯಲ್ಲೇ ತಂಗಬೇಕು'' ಎಂದು ಆಹ್ವಾನಿಸಿದ್ದರಿಂದ ನಾನು ಭುವನ್‌ನ ಅತಿಥಿಯಾದೆ. ಮಾರನೆಯ ಬೆಳಗ್ಗೆ ಹತ್ತು ಗಂಟೆಗೆ ಭುವನ್ ಮತ್ತು ನಾನು ಸ್ಟೇಷನ್ನಿಗೆ ಹೋದಾಗ ಶರಲೇಖ ಅಲ್ಲಿ ನಮಗಾಗಿ ಕಾಯುತ್ತಿದ್ದ. ಅವನೊಂದಿಗೆ ಇದ್ದ ವ್ಯಕ್ತಿಯನ್ನು ಶರಲೇಖ ನಮಗೆ ಪರಿಚಯಿಸಿದ. ''ಇವರು ಪ್ರೊಫೆಸರ್ ಮಣಿಕಾಂತ್. ಇಲ್ಲಿನ ಕಾಲೇಜಿನಲ್ಲಿ ಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರು ಇವರು. ಜಯಶಂಕರ್ ತಮ್ಮ ಮರಣದ ದಿನ ಮಾಡುತ್ತಿದ್ದ ಪ್ರಯೋಗದ ದಾಖಲೆಯನ್ನು

ಅವರ ನೋಟ್ಸಿನಲ್ಲೇ ನೋಡಿದೆ. ಅದನ್ನು ಅರ್ಥಮಾಡಿಕೊಳ್ಳಲು ನಾನು ಈ ಪ್ರೊಫೆಸರ್ ಸಹಾಯ ಕೋರಿದೆ. ಅವರು ಸಂತೋಷದಿಂದ ಒಪ್ಪಿದರು. ಆ ಪ್ರಯೋಗವನ್ನು ಇವತ್ತು ಅವರ ಪ್ರಯೋಗ ಶಾಲೆಯಲ್ಲಿ ಪುನರ್‌ಸೃಷ್ಟಿ ಮಾಡಲು ಎಲ್ಲಾ ಸಜ್ಜುಗಳನ್ನೂ ಮಾಡಿದ್ದೇವೆ. ಈಗ ಎಲ್ಲರೂ ಪ್ರಯೋಗ ಶಾಲೆಗೆ ಹೋಗೋಣ. ಬ್ಯಾಂಕಿನ ಅಧಿಕಾರಿಗಳೂ ಅಲ್ಲಿಗೆ ಬಂದು ಸಾಕ್ಷಿಯಾಗಿರಲಿ. ಮನೆಯವರ ಪೈಕಿ ಚೇತನ್‌ಗೂ ಸಹಾ ಅಲ್ಲಿಗೆ ಬರಲು ಹೇಳಿರುವೆ. ಈಗ ಅಲ್ಲಿಗೆ ಹೋಗೋಣವೇ?'' ಎಂದು ಶರಲೇಖ ಹೇಳಿದ ನಂತರ ಎಲ್ಲರೂ ಹೊರಟು ಹತ್ತೂವರೆಯ ಹೊತ್ತಿಗೆ ಪ್ರಯೋಗಶಾಲೆ ತಲುಪಿದೆವು. ಅಲ್ಲಿ ಚೇತನ್ ನಮಗಾಗಿ ಕಾಯುತ್ತಿದ್ದ. ಮಣಿಕಾಂತರ ಇಬ್ಬರು ಶಿಷ್ಯಂದಿರು ಮೇಜಿನ ಮೇಲೆ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದರು.

ಮಣಿಕಾಂತ್ ಮೇಜಿನ ಬಳಿನಿಂತು, ''ಜಯಶಂಕರ್ ನೋಟ್ಸಿನ ಪ್ರಕಾರವೇ ಈ ಪ್ರಯೋಗವನ್ನು ಸಿದ್ಧಪಡಿಸಿದ್ದೇವೆ. ಮಾರ್ಬಲ್ ಹಲಗೆಗಳ ಗಣಿಗಾರಿಕೆಯನ್ನು ದಕ್ಷತೆಯಿಂದ ಮಾಡುವ ಪ್ರಯೋಗ ಇದು. ಇಲ್ಲಿ ಈ ಹಲಗೆಯ ಮೇಲೆ ಒಂದು ನೇರವಾದ ಹಳಿಯನ್ನು ಕೊರೆದಿರುವುದನ್ನು ನೋಡಬಹುದು. ಈ ಹಳಿಯ ಮೇಲೆ ಒಂದು ವಿಶಿಷ್ಟ ಆಸ್ಫೋಟಕದ ಪುಡಿಯನ್ನು ತುಂಬಿದ್ದೇವೆ. ಆಸ್ಫೋಟನೆಯಾದಾಗ ಅಪಾಯವಾಗದಿರಲೆಂದು ಮೇಜಿನ ಸುತ್ತಲೂ ಈ ಉಕ್ಕಿನ ಬೀರುಗಳನ್ನು ಜೋಡಿಸಿದ್ದೇವೆ. ಈಗ ದೂರದಲ್ಲಿ ಜೋಡಿಸಿರುವ ಈ ಕುರ್ಚಿಗಳಲ್ಲಿ ನಾವು ಕುಳಿತು ಯಾವ ಅಪಾಯವೂ ಇಲ್ಲದೇ ಈ ಪ್ರಯೋಗವನ್ನು ನೋಡಬಹುದು'' ಎಂದು ಹೇಳಿದರು. ನಾವೆಲ್ಲಾ ಕುರ್ಚಿಗಳಲ್ಲಿ ಕುಳಿತೆವು. ನನಗೋ ಆಶ್ಚರ್ಯ. ಏನು ಈ ಪ್ರಯೋಗ? ಅದರಿಂದ ಮರಣದ ವೇಳೆ ತಿಳಿಯುವುದಾದರೂ ಹೇಗೆ? ಎಂಬೆಲ್ಲಾ ಪ್ರಶ್ನೆಗಳು ನನ್ನನ್ನು ಕಾಡಿದವು. ನನ್ನ ಮೊಬೈಲಿನಲ್ಲಿ ಸಮಯ ಹನ್ನೊಂದಾಗಿತ್ತು. ಎಲ್ಲರೂ ಸುಮ್ಮನೆ ಕುಳಿತಿದ್ದರು. ಪ್ರಯೋಗ ಮಾಡಲು ಯಾರೂ ಮುಂದೆ ಬರಲಿಲ್ಲ. ಮಣಿಕಾಂತರನ್ನು ಈ ಬಗ್ಗೆ ಕೇಳುವುದಕ್ಕೂ ಎಲ್ಲರಿಗೂ ಸಂಕೋಚವಾದಂತಿತ್ತು. ಬಿಸಿಲು ಮಚ್ಚಿನಿಂದ ಬಿಸಿಲು ಕೋಲು ಮೇಜಿನ ತುದಿಯನ್ನು ಬೆಳಗುತ್ತಿತ್ತು. ಆಗಲೇ ನಾನು ಬಿಸಿಲು ಮಚ್ಚಿನ ಆಕಾರವನ್ನು ಗಮನಿಸಿದ್ದು. ಅದು ಚಚೌಕವಾಗಿರದೇ ದುಂಡಾಗಿತ್ತು ಮತ್ತು ಬಿಸಿಲು ಕೋಲು ಒಂದು ಕೋನದ ಆಕಾರದಲ್ಲಿದ್ದು ಕೋನದ ತುದಿ ಮೇಜನ್ನು ತಗುಲಿತ್ತು. ಮಣಿಕಾಂತ್, ''ಜಯಶಂಕರ್ ವಿಸ್ಫೋಟಕವನ್ನು ಬೆಂಕಿಹೊತ್ತುವಂತೆ ಮಾಡಲು ಸೂರ್ಯನ ಶಾಖವನ್ನು ಬಳಸುವ ಬಗ್ಗೆ ಪ್ರಯೋಗ ಮಾಡುತ್ತಿದ್ದರು. ಅದಕ್ಕಾಗಿಯೇ ಅವರು ಒಂದು ಪ್ರಬಲವಾದ ಲೆನ್ಸ್ ಅನ್ನು ಬಿಸಿಲು ಮಚ್ಚಿನ ಜಾಗದಲ್ಲಿ ಜೋಡಿಸಿದ್ದರು. ಲೆನ್ಸ್‌ನಿಂದ ಬರುವ ಕೇಂದ್ರೀಕೃತ ಬೆಳಕು ಈ ಸ್ಫೋಟಕದ ಹಳಿಯ ಮೇಲೆ ಬಿದ್ದಾಗ ಹನ್ನೆರಡು ಸೆಕೆಂಡುಗಳಲ್ಲಿ ಅದು ಹತ್ತಿ ಸ್ಫೋಟಗೊಳ್ಳುವುದು ಖಂಡಿತ. ಈಗ ನೋಡಿ, ಸಮಯ ಸನ್ನಿಹಿತವಾಗುತ್ತಿದೆ'' ಎನ್ನುತ್ತಿರುವಾಗಲೇ, ಭೂಮಿಯ ಚಲನೆಯನ್ನನುಸರಿಸಿ ನಿಧಾನವಾಗಿ ಚಲಿಸುತ್ತಿದ್ದ ಬೆಳಕಿನ ತುದಿ ಮಾರ್ಬಲ್ ಹಲಗೆಯನ್ನು ದಾಟಿ ಹಳಿಯ ಸಮೀಪಕ್ಕೆ ಬರುತ್ತಿತ್ತು. ಬೆಳಕಿನ ತುದಿ ಸ್ಫೋಟಕದ ಪುಡಿಯನ್ನು ತಾಗಿದ ಹಲವೇ ಕ್ಷಣಗಳಲ್ಲಿ ಕಿವಿಗಡಕಿಚ್ಚುವಂತಹ

ಸ್ಫೋಟವಾಯಿತು. ಮಾರ್ಬಲ್ಲಿನ ಚೂರುಗಳು ಎಲ್ಲ ದಿಕ್ಕಿನಲ್ಲೂ ಹಾರಾಡಿ ಉಕ್ಕಿನ ಬೀರುಗಳನ್ನು ಅಪ್ಪಳಿಸಿ ಬಿದ್ದವು. ಆಗ ಸಮಯ ಸರಿಯಾಗಿ ಹನ್ನೊಂದು ಇಪ್ಪತ್ತಾಗಿತ್ತು.

ಶರಲೇಖ ತನ್ನ ಹೇಳಿಕೆ ಪ್ರಾರಂಭಿಸಿದ. ''ಜಯಶಂಕರ್ ಈ ಸ್ಫೋಟದ ಶಕ್ತಿಯನ್ನು ಸರಿಯಾಗಿ ಲೆಕ್ಕಮಾಡಿರಲಿಲ್ಲ. ಹಾಗೆ ಮಾಡಿದ್ದರೆ ಅವರು ಅಷ್ಟು ಹತ್ತಿರ ನಿಂತಿರುತ್ತಿರಲಿಲ್ಲ. ಅವರ ಮರಣದ ಸಮಯ ಸರಿಯಾಗಿ ಹನ್ನೊಂದು ಇಪ್ಪತ್ತೆಂದು ಈಗ ಸಾಬೀತಾಯಿತು. ತಮ್ಮೇಗೌಡರ ಮರಣ ಹನ್ನೆರಡು ಐದು ಎಂಬ ಆಸ್ಪತ್ರೆ ದಾಖಲೆಯೇ ಹೇಳುತ್ತದೆ. ಈ ಎರಡು ಮಾಹಿತಿಗಳನ್ನು ಬಳಸಿ ಬ್ಯಾಂಕಿನವರು ತಮ್ಮ ಮುಂದಿನ ನಿರ್ಧಾರವನ್ನು ತೆಗೆದುಕೊಳ್ಳಬಹುದು.'' ಆ ಸಂಜೆ ಊಟವಾದ ನಂತರ ನಾವು ಭುವನ್ ವ್ಯವಸ್ಥೆಮಾಡಿದ್ದ ಟ್ಯಾಕ್ಸಿಯಲ್ಲಿ ಬೆಂಗಳೂರಿಗೆ ಹೊರಟೆವು. ತುಂಗಾನದಿಯ ಬಳಿ ಬಂದಾಗ ನದಿಯನ್ನು ದಾಟಲು ಹಾಕಿದ್ದ ಕಮಾನು ಸೇತುವೆ ಬಣ್ಣದ ದೀಪಗಳಿಂದ ಬಹು ಸುಂದರವಾಗಿ ಕಾಣುತ್ತಿತ್ತು. ಆದರೂ ಯಾಕೋ ನನಗೆ ಬೊಮ್ಮನ ಹಳ್ಳಿಯ ನೆನಪು ಪುನಃ ಪುನಃ ಮರುಕಳಿಸುತ್ತಿತ್ತು.

✷

## ಇಬ್ಬರ ಜಗಳ ಮೂರನೆಯವರಿಗೆ ಲಾಭ

**ಅಕ್ಕಪಕ್ಕದಲ್ಲಿ ಅಂಗಡಿಗಳಿದ್ದವು. ಅವರಲ್ಲಿ ಪೈಪೋಟಿ ಇದ್ದೇ ಇತ್ತು. ಒಂದು ದಿನ ಒಂದು ಅಂಗಡಿಯವರು ಹೀಗೆ ಫಲಕ ಹಾಕಿದರು. ಒಳ್ಳೆ ಪದಾರ್ಥ ಬೇಕಿದ್ದರೆ ನಮ್ಮ ಅಂಗಡಿಗೆ ಬನ್ನಿ ಕೆಟ್ಟ ಪದಾರ್ಥ ಬೇಕಾದರೆ ಪಕ್ಕದ ಅಂಗಡಿಗೆ ಹೋಗಿ. ಇದು ಪಕ್ಕದ ಅಂಗಡಿಯವನಿಗೆ ಗೊತ್ತಾಗಿ ಬಂದು ಏನ್ರೀ ನನ್ನ ಅಂಗಡೀಲಿ ಮಾರೋದೆಲ್ಲ ಕೆಟ್ಟ ಪದಾರ್ಥಗಳಾ ಅಂತ ರೇಗಿದ. ಅದಕ್ಕೆ ಈ ಅಂಗಡಿಯವನು ನೀನೂ ಫಲಕ ಹಾಕ್ಕೊ ಯಾರು ಬೇಡಾಂತಾರೆ ಅಂದ. ಸರಿ ಅವನೂ ಅದೇ ರೀತಿ ಫಲಕ ಹಾಕಿಸಿದ. ಜನರಿಗೆ ಗೊಂದಲ ಉಂಟಾಗಿ ಇವರಿಬ್ಬರ ಸಹವಾಸವೇ ಬೇಡ ಅಂತ ಬೇರೆ ಅಂಗಡಿಗೆ ಹೋಗೋಕೆ ಷುರು ಮಾಡಿದರು.**

ಅಮೆರಿಕಾ ಪತ್ರ

# ಟ್ರಿಕ್ಕಾರ್ ಟ್ರೀಟಾಯ ಮಂಗಳಂ!

**- ವಾಣೀ ಸುರೇಶ್**

**ಸಂ**ಜೆ ದೀಪ ಹಚ್ಚೋ ಹೊತ್ತು. ನಮ್ಮ ಮನೆಯ ಚಿಳ್ಳೆ ಪಿಳ್ಳೆಗಳು ಮುದ್ದು ಮುಖಗಳಿಗೆ ವಿಚಿತ್ರವಾಗಿ ಬಣ್ಣ ಬಳ್ಕೊಂಡು - ಪೈರೇಟ್, ಸ್ಪೈಡರ್ ಮ್ಯಾನ್, ರೆಪುಂಜೆಲ್, ಏರಿಯೆಲ್, ಜೀರುದುಂಬಿ, ಹೂವು, ಕಪ್‌ಕೇಕ್, ಸ್ನೋವೈಟ್, ರೆಡ್ ರೈಡಿಂಗ್ ಹುಡ್, ವಿಸರ್ಡ್ ಆಫ್ ಓಜ್-ನ ಡಾರತಿ, ಸಿಂಹ, ಬೆದರು ಬೊಂಬೆ, ಟಿನ್ ಮ್ಯಾನ್ - ಮುಂತಾದ ಆಯ್ಕೆಗಳಿಂದ ತಮ್ಮಿಷ್ಟದ ವೇಷಗಳನ್ನ ತೊಟ್ಕೊಂಡು, ಕಣ್ಣು-ಮೂಗು-ಬಾಯಿ ಪೈಂಟ್ಮಾಡಿರೋ ಕಿತ್ತಳೆ ಬಣ್ಣದ ಪ್ಲಾಸ್ಟಿಕ್ ಕುಂಬಳಕಾಯನ್ನ ಹಿಡ್ಕೊಂಡು ದೊಡ್ಡೋರಿಗೋಸ್ಕರ ಆ ಹದಿನಾಲ್ಕು ಡಿಗ್ರಿ ಚಳೀಲೂ ಉತ್ಸಾಹದಿಂದ ಕಾಯ್ತಾ ಒಂಟಿ ಕಾಲಲ್ಲಿ ನಿಂತಿದ್ರು. ಒಂದು ಕಾಲದಲ್ಲಿ ಶ್ರಾವಣ ಶನಿವಾರದ ದಿನ ನಮ್ಮ ಹುಡುಗರು ''ವೆಂಕಟೇಶಾಯ ಮಂಗಳಂ'' ಅಂತ ಅಕ್ಕಪಕ್ಕದ ಮನೆಗಳಿಗೆ ಪಡಿ ಬೇಡಕ್ಕೆ ಹೋಗ್ತಿರ್ಲಿಲ್ವೇ ಹಾಗೆ ಇಲ್ಲಿವತ್ತು ಅಕ್ಕಪಕ್ಕದ ಮನೆಗ್ಹೋಗಿ ''ಟ್ರಿಕ್ ಆರ್ ಟ್ರೀಟ್'' ಅಂತ ಕೂಗಿ ಕೇಳಿ, ಚಾಕಲೇಟಿನ ಪಡಿ ಬೇಡೋ ಪ್ರೋಗ್ರಾಮ್ ಇತ್ತಲ್ಲ! (ಒಂದು ವರ್ಷದ ನಮ್ಮ ಅವಂತಿಕಾ ಮಾತ್ರಾ, ಉಳಿದೋರೆಲ್ರೂ ಹೇಳಿದ್ಮೇಲೆ ಅವಳಿಗೆ ಬರೋ ಏಕ ಮಾತ್ರ ಪದವಾದ ''ಅಜ್ಜೀ, ಅಜ್ಜೀ'' ಅಂತ ಕೂಗಿ ''ಟ್ರಿಕ್ ಆರ್ ಟ್ರೀಟ್'' ಅಂತ ಅದರ ಭಾಷೆಯಲ್ಲಿ ಕೇಳ್ತಿತ್ತು, ಸದ್ಯ ಇಲ್ಲಿರೋರ್ಯಾರಿಗೂ ಅರ್ಥವಾಗದ್ರಿಂದ ಒಳ್ಳೇದಾಯ್ತು ಅದಿರಲಿ).

ಅಂದ ಹಾಗೆ, ಇಲ್ಲಿಯ ಇವರ ಹಬ್ಬದಲ್ಲಿ ನಮ್ಮ ಶ್ರಾವಣ ಶನಿವಾರದ ಆ ಲಿಂಗಭೇದ ಇಲ್ಲ ಅಂತಿಟ್ಕೊಳ್ಳಿ! ಇಲ್ಲಿ ತೊಟ್ಟಿಲ ಕಂದಮ್ಮಗಳಿಂದ ಹಿಡಿದು ಹುಮ್ಮಸ್ಸಿರೋ ದೊಡ್ಡೋರು, ಚಿಕ್ಕೋರು ಅನ್ನದೆ, ಕೊನೆಗೆ ತಮ್ಮ ಸಾಕು ನಾಯಿ ಬೆಕ್ಕುಗಳಿಗೆ ಕೂಡಾ ವೇಷ ಮರೆಸಿ ಸಡಗರಪಡ್ತಾರೆ! ಮಕ್ಕಳು ತೀರಾ ಚಿಕ್ಕೋರಾದರೆ ಅವರ ಮನೆಯೋರು ಸಹಾ ಅವರ ಜೊತೆಯಲ್ಲಿ ಹೋಗೋದು ಇಲ್ಲಿಯ ನೆಮ್ಮದಿಯುಕ್ತ ಸಂಸಾರಸ್ಥರ ಒಂದು ಪರಿಪಾಠ. ಅಂತೂ ಮಕ್ಕಳು ಗುಂಪು ಕಟ್ಕೊಂಡು - ನಿಮ್ಮಲ್ಲಿ ''ಗಣೇಶನ್ನ ಇಟ್ಟಿದ್ದೀರೇನ್ರೀಂತ'' ಕೇಳ್ಕೊಂಡು ಮನೆ ಮನೆಗಳಿಗೆ ಹೋಗೋ ಹಾಗೆ, ಇಲ್ಲಿ ಅದಕ್ಕಾಗಿ ಪಂಪ್ಕಿನ್ ಪ್ಯಾಚ್-ಗಳಲ್ಲಿ ಬೆಳೆಸಿದ ಕಿತ್ತಳೆ ಬಣ್ಣದ ಕಣ್ಣು-ಮೂಗು-ಬಾಯಿ ಕೊರೆದು, ಒಳಗಿಟ್ಟಿರೋ ಮೇಣದ ಬತ್ತಿಯ ದೀಪದ ಬೆಳಕಿನಿಂದಾಗಿ ಹೆದರಿಕೆ ಹುಟ್ಟಿಸುವಂತೆ ವಿಕೃತವಾಗಿ ಅಲಂಕರಿಸಲ್ಪಟ್ಟ(?) ಮನೆಗಳಿಗೆ ನುಗ್ತಾರೆ!

ಅವತ್ತು, ನಮ್ಮನೆಯ ಮುಂದಿನ ಬೀದಿಯಲ್ಲಿದ್ದ ಆ ಮನೆಯ ಅಂಗಳದಿಂದ ಏಳುತ್ತಿದ್ದ ಹೊಗೆ, ಕವಿದ ಸಂಜೆಗತ್ತಲನ್ನ ಇನ್ನಷ್ಟು ಮಬ್ಬಾಗಿಸಿ ನಿಗೂಢವಾಗಿಸಿತ್ತು. ಮುಂದಿನ

ಯಾರ್ಡ್-ನ (ಅಂಗಳದ) ಲಾನ್ ಮೇಲೆ ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ತಲೆ ಬುರುಡೆಗಳು, ಉದ್ದುದ್ದ ಮೂಳೆಗಳು, ನಡುವೆ ಸೊಟ್ಟ ಸೊಟ್ಟಕ್ಕೆ ಇಟ್ಟಿದ್ದ ಒಂದು ಧೂಳು ತಿಂದಿದ್ದ ಮುರುಕು ಶವದ ಪೆಟ್ಟಿಗೆ! ಅದರ ಬಾಗಿಲು ಸ್ವಲ್ಪ ತೆಕ್ಕೊಂಡಿದ್ರಿಂದಲೋ ಏನೋ ಬಹುಶಃ ಅದರೊಳಗಿದ್ದಿದ್ದ ಅಸ್ಥಿಪಂಜರದ ಬಿಳೀ ಮೂಳೆಗಳ ಒಂದು ಕೈ ಹೊರಗೆ ಚಾಚ್ಕೊಂಡು ನೇತಾಡ್ತಿತ್ತು ಬೇರೆ! ಅದನ್ನೂ ಎದುರಿಸಿ ಮುಂದೆ ನಡೆಯಿತು ನಮ್ಮ ಪುಟಾಣಿಗಳ ದಂಡು. ಚಾಕಲೇಟ್ ಮೇಲಿನ ಆಸೆ ನೋಡಿ, ಹೇಗಿರತ್ತೇಂತ!

ಓ ಕ್ಷಮಿಸಿ, ಅಂದು ಅಕ್ಟೋಬರ್ ಮೂವತ್ತೊಂದು, ಇಲ್ಲಿ ಅಮೆರಿಕೆಯಲ್ಲಿ ಹ್ಯಾಲೋವೀನ್ ಹಬ್ಬ ಅಂತ ಹೇಳೋದನ್ನೇ ಮರೆತೆ. (ಅಯ್ಯೋ ಇದನ್ನ ಹಬ್ಬ ಅಂದ್ನೇ ಛೇ! ಇರಲಿ ಬಿಡಿ, ಅವರವರ ಪದ್ಧತಿ ಅವರವರಿಗೆ). ಹೋಗ್ಲಿ, ಇನ್ನು ಮುಂದುವರಿಸೋಣವೇ!

ಅಂತೂ ಅಲ್ಲಿ ಟ್ರಿಕ್ ಆರ್ ಟ್ರೀಟ್ ಅಂತ ಕೂಗ್ತಾ ಮುಂದ್ಮುಂದೆ ನಡೆದ ಮಕ್ಕಳಿಗೆ ಇನ್ನೊಂದು ಸರ್ಪ್ರೈಸ್ ಕಾದಿತ್ತು. ಅಲ್ಲಿವರೆಗೂ ಅಲ್ಲೇ ಪಕ್ಕದಲ್ಲಿ ಸುಮ್ಮನೆ ಸ್ಟ್ಯಾಚುತರ ನಿಂತಿದ್ದ ಅಸ್ಥಿಪಂಜರಕ್ಕೆ ಇದ್ದಕ್ಕಿದ್ದ ಹಾಗೆ ಜೀವ ಬಂದು ಈ ಪಟಾಲಮ್ಮಿನ ಕಡೆ ಅತೀ ಮೆಲ್ಲಗೆ ತಿರುಗಿ, ಅದರ ಕೈಲಿದ್ದ ಬಿಲ್ಲು ಬಾಣಾನ ಇವರ ಕಡೆ ಗುರಿ ಇಟ್ಟು ಬಿಡ್ತು! ಪಾಪ, ನಮ್ಮ ಸೇರು-ಪಾವು-ಚಟಾಕುಗಳು ಕಿಟ್ ಅಂತ ಕಿರಿಚಿಕೊಂಡು ಸೈಡ್ ವಾಕ್ (ಫುಟ್‌ಪಾತ್) ಮೇಲೆ ನಿಂತ್ಕೊಂಡು ತಮಾಷೆ ನೋಡ್ತಿದ್ದ ನಮ್ಮ ಹತ್ತಿರ ಓಡಿ ಬಂದವು. ನಮ್ಮ ಅಸ್ತಿತ್ವದಿಂದಲೇ ಅರ್ಧ ಅವಕ್ಕೆ ಸಮಾಧಾನವಾದ್ರಿಂದ, ಪಾಪ ಇದ್ದಬದ್ದ ಧೈರ್ಯವೆಲ್ಲಾ ಒಟ್ಟುಗೂಡಿಸಿ ಮತ್ತೆ ಇನ್ನೊಂದು ಸಲ ಮುನ್ನುಗ್ಗಿದವು. ಅದೂ ಅಲ್ಲದೇ ಅಷ್ಟೊತ್ತಿಗೆ ಆ ಅಸ್ಥಿಪಂಜರಕ್ಕೆ ಬಂದಿದ್ದ ಪ್ರಾಣ ಮತ್ತೆ ಹೋಗಿ ಸ್ತಬ್ಧವಾಗಿ ನಿಂತಿತ್ತಲ್ಲ! ಸರಿ, ಅಲ್ಲೇ ಮುಂದೆ ಗಿಡದ ಮರೆಯಲ್ಲಿ ಕತ್ತಲಲ್ಲಿ ಒಬ್ಬಳು ವಿಚ್ ತನ್ನ ಪಕ್ಕದಲ್ಲೇ ಉದ್ದನೆ ಹಿಡಿಯ ಕೋಲಿನ ಪರಕೆ ಇಟ್ಕೊಂಡು ಒಂದು ಬಿದಿರಿನ ಬುಟ್ಟೀಲಿ ತರಾವರಿ ಚಾಕಲೇಟುಗಳನ್ನ ಸುರ್ಕೊಂಡು ಇವರನ್ನೆಲ್ಲಾ ''ಬನ್ನಿ ಬನ್ನಿ ಮಕ್ಕಳೇ, ತೊಗೊಳ್ಳಿ'' ಅಂತ ಕರೀತಾ ಕೂತಿದ್ಲು. ಇವು, ಹೊಸದಾಗಿ ಒಟ್ಟುಗೂಡಿಸಿದ್ದ ಧೈರ್ಯದಿಂದ ಓಡಿ ಹೋಗಿ ಕೈ ಚಾಚಿದರೆ ಆ ಚಾಕಲೇಟುಗಳ ಮಧ್ಯ ಒಂದು ಕೆಂಪನೆಯ ರಕ್ತಸಿಕ್ತ ಮುರುಕಲು ಹಸ್ತ ಕಾಣಬೇಕೇ! ಮತ್ತೆ ಕಿರುಚ್ಕೊಂಡು ಇವುಗಳು ದೌಡು. ಆಗ ತಕ್ಷಣ ಮನೆಯೊಳಗಿನ ಮತ್ತು ಯಾರ್ಡ್-ನ ದೀಪಗಳನ್ನು ಹತ್ತಿಸಿ ಮನೆಯಾತ ಮತ್ತು ಆತನ ಹೆಂಡತಿ ಮಕ್ಕಳು ತಮ್ಮೆಲ್ಲರ ವಿಕಾರವಾದ ಮಾಸ್ಕ್-ಗಳನ್ನು ತೆಗೆದು ಮಕ್ಕಳನ್ನ ಹತ್ತಿರ ಕರೆದು ನಕ್ಕು ನಗಿಸಿ ಅವರೆಲ್ಲರ ಜ್ಯಾಕ್ ಆಫ್ ಲ್ಯಾಂಟರ್ನ್ ಅನ್ನೋ ಪ್ಲಾಸ್ಟಿಕ್ ಕುಂಬಳಕಾಯಿಗಳನ್ನು ಚಾಕಲೇಟುಗಳಿಂದ ತುಂಬಿಸಿ ಕಳಿಸಿದರು. ಮಕ್ಕಳು ಫುಲ್ ಖುಷಿ!

''ಟ್ರಿಕ್ ಆರ್ ಟ್ರೀಟ್'' ಅನ್ನೋ ಪದಪುಂಜದಲ್ಲಿರೋ ''ಟ್ರಿಕ್'' ಅನ್ನೋದರ ಒಂದು ಮಾದರಿಯನ್ನೇ ಈಗ ನಾನು ವಿವರಿಸಿದ್ದು! ಇನ್ನು ''ಟ್ರೀಟ್'' ಅಂದ್ರೆ ಮಾಮೂಲಾಗಿ ಗೊತ್ತೇ ಇರೋ ಹಾಗೆ – ಬಂದ ಮಾರುವೇಷದ ಮಕ್ಕಳಿಗೆ ಪೆಪ್ಪರ್ಮಿಂಟ್, ಚಾಕ್ಲೇಟುಗಳನ್ನು ಹಂಚಿ ನಕ್ಕು ನಗಿಸಿ ಕಳಿಸೋದು – ಅಂತ, ಅಷ್ಟೇ! ಇದೆಲ್ಲ ನಡೆಯಕ್ಕೆ ಸುಮಾರು ಹದಿನೈದಿಪ್ಪತ್ತು ದಿನ

ಮೊದಲು, ಒಂದಿನ ಏನಾಯ್ತೂಂತ? ವಾರಕ್ಕೊಮ್ಮೆ ಬರೋ - ಕಸದ ಡಬ್ಬಾನ್ನ ಚಾಚಿ ಹಿಡಿದು ಮೇಲೆತ್ತಿ, ಕಸಾನ್ನ ತನ್ನ ಉದರಕ್ಕೆ ಸುರಿದುಕೊಳ್ಳೋ ದೈತ್ಯ ರೋಬೋಟಿಕ್ ಕೈಗಳಿರೋ - ಕಸದ ಲಾರಿಯ ವೈಖರಿ ತೋರಿಸಕ್ಕೆ ಮೊಮ್ಮಗು ಜೊತೆ ಹೊರಗೆ ನಿಂತಿದ್ದೆ. ಅವರ ತೋಟದ ಗುಲಾಬಿ ಗಿಡ ಕತ್ತರಿಸ್ತಾ ನಿಂತಿದ್ದ ಮೂಲೆ ಮನೆ ಮಿಸೆಸ್ ಹೋಪ್ ಮಗೂನ್ನೂ ಕರ್ಕೊಂಡು ಒಂದು ನಿಮಿಷ ಬಂದು ಹೋಗ್ತಿಯಾಂತ ಕರೆದಳು. ಸರೀಂತ ಹೋದೆ. ಸದಾ ಅಚ್ಚುಕಟ್ಟಿನ ಸುವ್ಯವಸ್ಥಿತ ಜೀವನ ನಡೆಸೋ ಅವಳ ಮನೆ ಯಾರ್ಡ್ ಅವತ್ತು ನೋಡಿದರೆ ಗಾಬರಿಯಾಗೋ ಹಾಗಿತ್ತು. ಎಲ್ಲಿ ನೋಡಿದರೂ ಗಿಡಗಳ ಮೇಲೆ ಹರಡಿದ್ದ ದಟ್ಟನೆಯ ಜೇಡರ ಬಲೆಗಳು, ಸೂರಿನಿಂದ ನೇತಾಡುತ್ತಿದ್ದ ಬಾವಲಿಗಳು, ಹೊಸಿಲಿನ ಬಳಿ ಕೆಟ್ಟದಾಗಿ ಗುರಾಯಿಸ್ತಾ ಕೂತ್ಕೊಂಡಿದ್ದ ಒಂದು ಪಿಂಗಾಣಿಯ ಕರೀ ಬೆಕ್ಕು, ಅದರ ಬದಿಯಲ್ಲಿ ಕೂರಿಸಿದ್ದ ಬನ್ನೋರನ್ನ ಎದುರುಗೊಳ್ಳಲು ಎರಡು ಪುಟಾಣಿ ಅಸ್ಥಿ ಪಂಜರಗಳು!... ಇನ್ನು, ಹೊಸಿಲನ್ನ ದಾಟಿದ ತಕ್ಷಣ ಇದೇನು ಮನೇನೋ ಅಥವಾ ಭೂತಬಂಗಲೇನೋ ಅಂತ ಅನ್ನಿಸೋ ಹಾಗೆ ಮಾರ್ಪಾಡಾಗಿತ್ತು ಅವಳ ಮನೆಯ ಲಿವಿಂಗ್ ರೂಮು! ಮಬ್ಬಾದ ಕೆಂಪು ದೀಪದ ಬೆಳಕಲ್ಲಿ ನೇತಾಡ್ತಿದ್ದ ಜೇಡರ ಬಲೆಗಳ ಅಡಿಯಲ್ಲಿ ಕೃತಕ ಬೆಂಕಿಯ ಉರಿನಾಲಗೆಗಳ ಮುಂದೆ ವಿವಿಧ ಭಂಗಿಯ ಚಿತ್ರ ವಿಚಿತ್ರ ವಿಕಾರವಾದ ಭೂತ ಪ್ರೇತಾದಿಗಳ ಬೊಂಬೆಗಳು, ವಿಚ್ಗಳು, ಇನ್ನಷ್ಟು ವಿವಿಧ ಗಾತ್ರದ ಸಣ್ಣ ಪುಟ್ಟ ಅಸ್ಥಿಪಂಜರಗಳು, ತಲೆಬುರುಡೆಗಳು ಇತ್ಯಾದಿ ಇತ್ಯಾದಿಗಳು ತುಂಬಾ ಸ್ವಾಭಾವಿಕವಾಗಿ ಕಾಣುವಂತೆ ಜೋಡಿಸಲ್ಪಟ್ಟಿದ್ದವು! ಸುಮಾರು ಎಪ್ಪತ್ತು ಎಪ್ಪತ್ತೈದು ವರ್ಷದ ಈ ಏಕಾಂಗಿ ಹೃದ್ರೋಗಿ ಮಹಿಳೆಗೆ ಸದ್ಯದಲ್ಲೇ ಬರೋದ್ರಲ್ಲಿದ್ದ ಹ್ಯಾಲೋವೀನ್ ಬಗ್ಗೆ ಅಷ್ಟು ಆಸಕ್ತಿ ಇರಬೇಕಾದ್ರೆ ಚಿಕ್ಕ ಮಕ್ಕಳ, ಹದಿ ಹರೆಯದೋರ ಮಾರು ವೇಷಗಳು, ಕಾಸ್ಟ್ಯೂಮ್ ಪಾರ್ಟಿಗಳು ಇನ್ನು ಹೇಗಿರಬಹುದು ಯೋಚಿಸಿ! ಇಷ್ಟು ಚೆನ್ನಾದ ಅರೇಂಜ್ಮೆಂಟ್ ಮಾಡಕ್ಕೆ ಅಷ್ಟೆಲ್ಲಾ (ಅವಲಕ್ಷಣಗಳನ್ನ) ಅದೆಲ್ಲಿಂದ ಕೂಡಿ ಹಾಕಿದೇಂತದಿದ್ದಕ್ಕೆ, ಅವಳು - ''ಅಯ್ಯೋ ವೆನೀ ಇದೇನ್ಮಹಾ. ಎದುರು ಮನೆ ಕೇಟೀ ಇಡೋದು ನೋಡ್ಬೇಕು ನೀನು! ಅವಳ ಹತ್ತಿರ ಇರೋ ಅಸ್ಥಿಪಂಜರಗಳೆಲ್ಲಾ ಒಂದೊಂದೂ ಒಂದೊಂದು ಆಳೆತ್ತರದೋವು ಗೊತ್ತಾ?'' - ಅಂತಂದಿದ್ದು ಕೇಳಿ, ಅವಳ ಮಾತಲ್ಲಿದ್ದಿದ್ದು ಅಸೂಯೆಯ ಛಾಯೆಯೋ ಅಥವಾ ಪ್ರಶಂಸೆಯೋ ಅಂತ ಒಂದು ಕ್ಷಣ ತಲೆ ಕೆರ್ಕೊಳ್ಳೋ ಹಾಗಾಯ್ತು. ಅಷ್ಟೇ ಅಲ್ಲ, ವರ್ಷಗಳ ಕೆಳಗೆ ನಮ್ಮಜ್ಜಿ ನಮ್ಮನ್ನ ಅವರದ್ದೇ ಆದ ರೀತೀಲಿ ಪ್ರೋತ್ಸಾಹಿಸಕ್ಕೆ - ''ಟಿ. ರಾಮರಾಯರ ಮನೆ ನಿಲುಗೌರಿಗಳನ್ನ ನೋಡಕ್ಕೆ ಎರಡು ಕಣ್ಣು ಸಾಲದು ಕಣ್ರೆ, ನೀವೆಲ್ಲಾ ಅದೇನ್ ಮಹಾಬೊಂಬೆ ಇಡ್ತೀರೋ ಕಾಣೆ'' ಅಂತ ಮೂತಿ ತಿವೀತಿದ್ದಿದ್ದೂ ಜ್ಞಾಪಕಕ್ಕೆ ಬಂದು ನಗು ಬಂತೂನ್ನಿ.

ಹೀಗೆ ಹ್ಯಾಲೋವೀನ್ ಬರಕ್ಕೆ ಸುಮಾರು ದಿನಗಳ ಮುಂಚೆಯೇ ಅದಕ್ಕಾಗಿ ಸಂಭ್ರಮದ ಸಿದ್ಧತೆಗಳು ಶುರುವಾಗಿ ಬಿಡತ್ತೆ. ಸಾಧಾರಣವಾಗಿ ಘೋರ ರೂಪದ ಮಾಸ್ಕ್‌ಗಳು, ನಿಜವಾದವುಗಳ ತಲೆ ಮೇಲೆ ಹೊಡೆಯುವಂತೆ ಕಾಣೋ - ತಲೆ ಬುರುಡೆಗಳು,

ಅಸ್ಥಿಪಂಜರಗಳು, ಮೂಳೆಗಳು, ರಕ್ತಸಿಕ್ತ ಕೈ ಕಾಲುಗಳು, ಸಮಾಧಿಗಳು – ಒಟ್ನಲ್ಲಿ ಸ್ಮಶಾನ, ಕಳೇಬರ ಇತ್ಯಾದಿ ಮೃತರ ಜಗತ್ತಿಗೆ ಸಂಬಂಧಪಟ್ಟ ಎಲ್ಲಾ ರೀತಿಯ ಅಬದ್ಧ ಕೃತಕ ವಸ್ತು ವಿಶೇಷಗಳಿಗೂ, ವೇಷ ಭೂಷಣಗಳಿಗೂ, ಸುಗ್ಗಿಗೆ ಸಂಬಂಧಪಟ್ಟ ಕೃತಕ ಜೋಳದ ತೆನೆ, ಒಣ ಹುಲ್ಲು, ಹುಲ್ಲಿನಿಂದ ಮಾಡಿದ ಬೆದರು ಬೊಂಬೆ, ಹಣ್ಣಾದ ಬಣ್ಣ ಬಣ್ಣದ ಎಲೆ ಬಳ್ಳಿಗಳು ಇವೆಲ್ಲಕ್ಕೂ, ಅಕ್ಟೋಬರ್ ಮೊದಲಿಂದಲೇ ಸ್ಟೋರ್‌ಗಳಲ್ಲಿ ಒಳ್ಳೆಯ ಡಿಮ್ಯಾಂಡ್ ಶುರುವಾಗಿ ಬಿಡತ್ತೆ. ಇವೆಲ್ಲಾ ಮುಂಬರುವ ಹ್ಯಾಲೋವೀನಿಗಾಗಿ ತಮ್ಮ ಮನೆಗಳನ್ನು ಸಿಂಗರಿಸಲು ಇಲ್ಲಿಯವರು ಪ್ರದರ್ಶಿಸುವ ತಮ್ಮ ಅಲಂಕಾರ ಪ್ರಜ್ಞೆಯ ಕುರುಹು!

ಇದು ಇಲ್ಲಿಯ ಬೇಸಿಗೆಯ ಕೊನೆಯ ದಿನವೆಂದು ಮತ್ತು ಇಲ್ಲಿಯ ರೈತರ ಸುಗ್ಗಿಯ ಕೊನೆಯ ದಿನವೆಂದೂ ಸಹಾ ಪರಿಗಣಿಸಲ್ಪಡೋದ್ರಿಂದ ಹಾಗೂ ಇದರ ಜೊತೆ ಜೊತೆಗೆ ಕಾಲಿಡೋ ಥಂಡಿಯ ಕಾರಣದಿಂದ ಚಳಿಗಾಲದ ಮೊದಲನೆಯ ದಿನವೆಂದೂ ಆಚರಿಸಲ್ಪಡುತ್ತದೆ. ಇತಿಹಾಸದ ಪ್ರಕಾರ ಮಧ್ಯಯುಗದಷ್ಟು ಪ್ರಾಚೀನತೆಯುಳ್ಳ ಸೆಲ್ಟಿಕ್ ಮೂಲದ ಈ ಹಬ್ಬ, ಸೆಲ್ಟಿಕ್ ಭಾಷೆಯನ್ನು ಮಾತನಾಡೋ ಪಶ್ಚಿಮ ಯೂರೋಪಿನ ಬ್ರಿಟನ್, ಸ್ಕಾಟ್ಲ್ಯಾಂಡ್, ಐರ್ಲ್ಯಾಂಡ್, ಕಾರ್ನ್ವಾಲ್, ವೇಲ್ಸ್ ಇವೇ ಮುಂತಾದ ಆರೂ ಪ್ರದೇಶಗಳನ್ನೂ ಒಳಗೊಂಡು ವ್ಯಾಪಕತೆಯನ್ನು ಪಡೆದಿದೆ. ''ಸೌ ಈನ್'' ಎಂದು ಉಚ್ಚರಿಸೋ, ಆಗ ಮೊದಲಿಗೆ ಇದ್ದ ಹೆಸರು ಈಗ ಹ್ಯಾಲೋವೀನ್ ಅಂತ ಅಪಭ್ರಂಶಗೊಂಡಿದೆ. ಅಕ್ಟೋಬರ್ ಮೂವತ್ತೊಂದರಂದು ಪ್ರಾರಂಭವಾಗೋ ಈ ಮೂರು ದಿನಗಳ ಹಬ್ಬ, ನವೆಂಬರ್ ಒಂದರಂದು ''ಆಲ್ ಸೇಂಟ್ಸ್ ಡೇ'' ಎಂದೂ, ನವೆಂಬರ್ ಎರಡರಂದು ''ಆಲ್ ಸೋಲ್ಸ್ ಡೇ'' ಎಂದೂ ಆಚರಿಸಲ್ಪಡುತ್ತದೆ. ಹೆಸರೇ ಸೂಚಿಸುವಂತೆ ವರ್ಷಕ್ಕೊಮ್ಮೆ ಮೃತರ ಆತ್ಮಗಳನ್ನು ಆಹ್ವಾನಿಸಿ ಆದರಿಸಿ ಸತ್ಕರಿಸುವ ಉದ್ದೇಶದಿಂದ ಪ್ರಾರಂಭವಾದ ಇದರ ಆಚರಣೆ ಕಾಲಕ್ರಮೇಣ ಬದಲಾವಣೆಗೊಂಡು ಇಂದಿನ ಸ್ವರೂಪಕ್ಕೆ ಇಳಿದಿದೆ! ''ಆಲೋ ಸೋಲ್ಸ್ ಡೇ'' ದಿನದಂದು ಬಡಬಗ್ಗರು, ನಿರಾಶ್ರಿತರು ಮನೆಮನೆಗಳಿಗೆ ಹೋಗಿ ''ಸೋಲ್ ಕೇಕ್'' ಎಂಬ – ಹಿಟ್ಟು, ಆಲೂಗೆಡ್ಡೆ, ಬೆಣ್ಣೆ, ಸಕ್ಕರೆ, ಜಾಯಿಕಾಯಿ, ದಾಲ್ಚಿನ್ನಿ ಇತ್ಯಾದಿಗಳ ಮಿಶ್ರಣದಿಂದ ತಯಾರಿಸಿದ ಒಂದು ರೀತಿಯ ಮೃದುವಾದ ಸಿಹಿ ತಿಂಡಿಯನ್ನು ಬೇಡಿ ಪಡೆಯುತ್ತಿದ್ದ ''ಸೋಲಿಂಗ್'' ಎಂಬ ಪ್ರಕ್ರಿಯೆ, ಈಗ ಮಕ್ಕಳ ''ಟ್ರಿಕ್ ಆರ್ ಟ್ರೀಟ್'' ಆಗಿ ಪರಿವರ್ತನೆಯಾಗಿದೆ. ಅಮೆರಿಕೆಯ ನವನಗರೀಕತೆಯ ಅನುಕೂಲಸಿಂಧು ಪ್ರಕೃತಿಗನುಗುಣವಾಗಿ ಚಾಕಲೇಟ್ – ಪೆಪ್ಪರ್ಮಿಂಟುಗಳ ವಿತರಣೆಯಾಗಿ ಪರಿಣಮಿಸಿದೆ! ಪ್ರಾಚೀನರು ನಂಬುತ್ತಿದ್ದ ತುಂಟ ಫೇರಿಗಳು, ಕಿಡಿಗೇಡಿ ಗಾಬ್ಲಿನ್‌ಗಳು ಮತ್ತು ಕಾಡಿಸುವ ಭೂತ ಪ್ರೇತಾದಿಗಳ ಪ್ರಬಲತೆ ಪ್ರಕೃತಿಯ ಈ ಋತುಮಾನದ ಬದಲಾವಣೆಯ ಸಮಯದಲ್ಲಿ ಅತಿ ಹೆಚ್ಚಾಗಿ ಅಸ್ತಿತ್ವದಲ್ಲಿರುವುದಾಗಿ ತಿಳಿದಿದ್ದ ಅವರ ನಂಬಿಕೆಗನುಗುಣವಾಗಿ, ಅವರ ಸುಗ್ಗಿಯ ಫಸಲನ್ನು ಅವುಗಳಿಂದ ರಕ್ಷಿಸಲು ನಡೆಸುತ್ತಿದ್ದ ಅಭ್ಯಾಸಗಳ ಸಾಂಕೇತಿಕ

ಪಳೆಯುಳಿಕೆಗಳೇ ಇಂದಿನ ಘೋರ ಸ್ವರೂಪದ ಮುಖವಾಡಗಳು, ವಿಕೃತ ವೇಷ ಭೂಷಣಗಳು ಹಾಗೂ ಕಾಸ್ಟ್ಯೂಮ್ ಪಾರ್ಟಿಗಳು ಮತ್ತು ಚರ್ಚ್‌ಗಳಲ್ಲಿ ಇಂದಿಗೂ ಈ ದಿನಗಳಲ್ಲಿ ನಡೆಯೋ ವಿಶೇಷ ಮಾಸ್-ಗಳು!

ಸಾಮಾನ್ಯವಾಗಿ ನವರಾತ್ರಿ ಹಾಗೂ ದೀಪಾವಳಿಗಳ ಮಧ್ಯದಲ್ಲಿ ಬಂದು ನಮ್ಮ ಶ್ರಾವಣ ಶನಿವಾರ, ಗಣೇಶನ ಹಬ್ಬ, ಮಹಾಲಯ ಅಮಾವಾಸ್ಯೆ, ನವರಾತ್ರಿ ಬೊಂಬೆಗಳು, ದೀಪಾವಳಿ ಮುಂತಾದವುಗಳ ಜೊತೆ ಇದಕ್ಕಿರೋ ಸಾಮ್ಯತೆಯಿಂದಾಗಿ ಅವುಗಳ ಕಲಸು ಮೇಲೋಗರದಂತಿರೋ ಈ ಹಬ್ಬದ ಐತಿಹ್ಯವೂ ರೋಚಕವೇ ಹೌದು. ಆದರೂ, ಇದ್ಯಾವ ಅರ್ಥವನ್ನೂ ತಿಳಿಯದೇ ನಮ್ಮವರೂ ನಮ್ಮ ಶ್ರೀಮಂತ ಸಂಸ್ಕೃತಿಯನ್ನು ಕಡೆಗಣಿಸಿ, ಇತ್ತೀಚಿಗೆ ಕೇವಲ ಮೋಜಿಗಾಗಿ ಹ್ಯಾಲೋವೀನ್ ಮತ್ತು ಕಾಸ್ಟ್ಯೂಮ್ ಪಾರ್ಟಿಗಳನ್ನು ಆಚರಿಸುವುದು ಪಾಶ್ಚಾತ್ಯರ ಅಂಧಾನುಕರಣೆಯಷ್ಟೇ ಅಲ್ಲದೇ ಇನ್ನೇನು ಅಂತ ನನ್ನ ಅನಿಸಿಕೆ.

ಇಷ್ಟನ್ನೆಲ್ಲಾ ನಾನಿಲ್ಲಿ ನಿಮಗೆ ಹೇಳೋವಷ್ಟರಲ್ಲಿ ನನ್ನ ಮೊಮ್ಮಕ್ಕಳು ಬಂದು ಅವರ ಹ್ಯಾಲೋವೀನಿನ ಚಾಕಲೇಟ್ ಸಂಪಾದನೆಯ ಸ್ಕೋರ್ ಬಗ್ಗೆ ಮತ್ತೆ ಮತ್ತೆ ಎಣಿಸಿ ಕೂಗಾಡ್ತಿವೆ! ಇನ್ನು ಆರು ತಿಂಗಳು ಅವರ ಅಪ್ಪ ಅಮ್ಮಂದಿರಿಗೆ ಮಕ್ಕಳ ಆಸೆ ತಣಿಸಲು ಚಾಕಲೇಟ್ ತರೋ ರಗಳೇ ಇಲ್ಲ ಬಿಡಿ!

✷

---

ಹಿರಿಯ ನಾಗರಿಕರಿಗೆ ಉಚಿತ
ದಂತ ಸೆಟ್ - ಸುದ್ದಿ



# ಸೀರಿಯಸ್ ಗಣಿತಜ್ಞರ ಇನ್ನೊಂದು ಮಗ್ಗುಲು

**- ರೋಹಿತ್ ಭಟ್**

## ದಾಂಪತ್ಯ ಪ್ರೀತಿ

ಶ್ರೀನಿವಾಸ ರಾಮಾನುಜನ್, ಅಂದಿನ ಕಾಲದ ಭಾರತೀಯ ಪದ್ಧತಿಯಂತೆ, ಇನ್ನೂ ಕನ್ಯೆಯಾಗಿರದಿದ್ದ 9 ವರ್ಷದ ಪುಟ್ಟ ಹುಡುಗಿ ಜಾನಕಿಯನ್ನು ಮದುವೆಯಾದವರು. ಆಗ, ರಾಮಾನುಜನ್‌ರಿಗೆ 22 ವರ್ಷ ವಯಸ್ಸು. ಅವರ ತಾಯಿ ಕೋಮಲತ್ತಮ್ಮಾಳ್, ಹೆಸರಲ್ಲಷ್ಟೇ ''ಕೋಮಲ''ರಾಗಿದ್ದವರು. ಜಾನಕಿಯನ್ನು ಮನೆತುಂಬಿಸಿಕೊಂಡ ಮೇಲೆ ತನ್ನ ಅತ್ತೆಯ ದರ್ಪವನ್ನೆಲ್ಲ ಆ ಹುಡುಗಿಯ ಮೇಲೆ ತೋರಿಸುತ್ತಲೇ ಇದ್ದರು. ರಾಮಾನುಜನ್ ಎದುರಿರುವಾಗ ತುಂಬ ಪ್ರೀತಿಯಿದೆ ಎನ್ನುವಂತೆ ವರ್ತಿಸುತ್ತ, ಅವರಿಲ್ಲದಾಗ ಜೋರಾಗಿ ಗದರಿಸುತ್ತ ಒಂದು ರೀತಿಯಲ್ಲಿ ಆ ಕಾಲದ ''ಟಿಪಿಕಲ್'' ಅತ್ತೆಯಾಗಿ ಬದುಕುತ್ತಿದ್ದವರು ಕೋಮಲತ್ತಮ್ಮಾಳ್. ಕಾಲಕ್ರಮೇಣ ಈ ಇಬ್ಬಗೆಯ ನೀತಿಯ ಪರಿಚಯ ರಾಮಾನುಜನ್‌ರಿಗೆ ಆಯಿತು. ಆದರೆ, ತನ್ನ ತಾಯಿಯನ್ನು ಧಿಕ್ಕರಿಸಿ ಹೋಗುವಷ್ಟು ಕಟುವಾಗಿರದ ರಾಮಾನುಜನ್ ಹೆಂಡತಿಯನ್ನು ತುಂಬ ಪ್ರೀತಿಸುತ್ತಿದ್ದರು. ಈ ಅತ್ತೆ-ಸೊಸೆಯರ ಒಡಕಲು ಸಂಬಂಧ ಎಂದಾದರೂ ಸರಿಯಾದೀತಪ್ಪ ಎಂದು ಮನಸ್ಸಲ್ಲೇ ವ್ಯಾಕುಲರಾಗಿ ಯೋಚಿಸುತ್ತಲೂ ಇದ್ದರೇನೋ.

ರಾಮಾನುಜನ್ ಇಂಗ್ಲೆಂಡಿಗೆ ಹೋಗಬೇಕಾಗಿ ಬಂದಾಗ, ಅವರಿಗೆ ತನ್ನ ಪತ್ನಿಯನ್ನು ಅಗಲಿರಬೇಕಲ್ಲ ಎನ್ನುವ ಚಿಂತೆಯೇ ಎಲ್ಲಕ್ಕಿಂತ ಹೆಚ್ಚು ದುಃಖ ತಂದದ್ದು. ಅಲ್ಲದೆ, ತಾನಿರದಾಗ ತನ್ನ ತಾಯಿ, ಪತ್ನಿಯನ್ನು ಬೆಂಡೆತ್ತುತ್ತಾರೆನ್ನುವ ಸತ್ಯವೂ ಅವರಿಗೆ ತಿಳಿದಿತ್ತು. ಹೊರಡಲು ಒಂದುವಾರ ಇರುವಾಗಲೇ ಅವರ ಹಡಗು ಮದರಾಸಿನ ಬಂದರುಕಟ್ಟೆಗೆ ಬಂದುನಿಂತಿತ್ತು. ಬಂದರಿನಲ್ಲಿ ಕೆಲಸ ಮಾಡುತ್ತಿದ್ದವರಾದ್ದರಿಂದ, ರಾಮಾನುಜನ್‌ರಿಗೆ ಅಲ್ಲಿ ಒಳಹೋಗುವ ಅನುಮತಿ ಇತ್ತು. ಅವರು ಒಂದು ದಿನ ಜಾನಕಿಯನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಹಡಗಿನ ಒಳಗೆಲ್ಲಾ ತೋರಿಸಿದರು. ತಾನು ಎಲ್ಲಿ ಮಲಗುತ್ತೇನೆ, ಎಲ್ಲಿ ಊಟಕ್ಕೆ ಕೂರುತ್ತೇನೆ ಎಂಬ ಎಲ್ಲ ಸಣ್ಣಪುಟ್ಟ ಮಾಹಿತಿಗಳನ್ನೂ, ಹಡಗೆಂಬ ಹೊಸ ಪ್ರಪಂಚವನ್ನು ಬೆಕ್ಕಸಬೆರಗಾಗಿ ನೋಡುತ್ತಿದ್ದ ಜಾನಕಿಗೆ ಕೊಟ್ಟರು. ಕೊನೆಗೆ ಆಕೆಯ ತೋಳು ಹಿಡಿದು, ''ಜಾನಕಿ, ನೀನು ಇಲ್ಲಿರುವಾಗ ನಾನು ಹೇಗೆ ಅಷ್ಟು ದೂರದ ವಿದೇಶಕ್ಕೆ ಪ್ರವಾಸ ಹೊರಡಲಿ? ನಿನ್ನ ಮುಖ ನೋಡುತ್ತಿದ್ದರೆ ಅಂತಹ ಎಲ್ಲ ಆಸೆಯೂ ಇಂಗಿಹೋಗಿ ಇಲ್ಲೇ ಉಳಿದುಬಿಡೋಣ ಅನ್ನಿಸುತ್ತದೆ. ಹಾಗಾಗಿ ನಾನು ಹೊರಡುವ ದಿನ ನೀನು ಇಲ್ಲಿ ಇರಲೇಬಾರದು!'' ಎಂದು ಗದ್ಗದಿತರಾಗಿ ನುಡಿದರು. ಅಷ್ಟೇ ಅಲ್ಲ, ಹಡಗು ಹೊರಡುವ ಎರಡು ದಿನ ಮುಂಚೆಯೇ ಆಕೆಯನ್ನು ದೂರದ ತವರುಮನೆಗೆ ಕಳಿಸಿಕೊಟ್ಟರು!

## ಆದರ್ಶ ಪ್ರಪಂಚ

ಗ್ರೆಗೊರಿ ಪೆರೆಲ್ಮನ್ ರಷ್ಯದ ಗಣಿತ ಪ್ರತಿಭೆ. ಕ್ಲೇ ಗಣಿತ ಸಂಸ್ಥೆ ಜಗತ್ತಿನ ಮುಂದಿಟ್ಟಿದ್ದ ಏಳು ಸಮಸ್ಯೆಗಳ ಪೈಕಿ ಒಂದನ್ನು ಪೂರ್ತಿಯಾಗಿ ಪರಿಹರಿಸಿದವನು ಪೆರೆಲ್ಮನ್ (ಉಳಿದ ಆರು ಇನ್ನೂ ಬಿಡಿಸಲಾರದ ಬ್ರಹ್ಮಗಂಟಾಗಿಯೇ ನಿಂತಿವೆ!). ಈ ಸಮಸ್ಯೆಗಳ ವಿಶೇಷವೇನೆಂದರೆ, ಪ್ರತಿ ಸಮಸ್ಯೆಯನ್ನು ಬಿಡಿಸಿದವರೂ ಹತ್ತುಲಕ್ಷ ಡಾಲರುಗಳನ್ನು ಬಹುಮಾನವಾಗಿ ಪಡೆಯುತ್ತಾರೆ. ವಾಗ್ದಾನದ ಪ್ರಕಾರ, ಕ್ಲೇ ಸಂಸ್ಥೆ ಪೆರೆಲ್ಮನ್‌ಗೆ ಬಹುಮಾನ ಕೊಡಲು ಮುಂದೆ ಬಂದಿತು. ಅಂತಾರಾಷ್ಟ್ರೀಯ ಗಣಿತ ಸಮ್ಮೇಳನದಲ್ಲಿ ಅವನಿಗೆ ''ಗಣಿತದ ನೊಬೆಲ್'' ಎಂದೇ ಖ್ಯಾತವಾದ ಫೀಲ್ಡ್ಸ್ ಪದಕವನ್ನು ಕೊಡುವುದೆಂದೂ ತೀರ್ಮಾನಿಸಲಾಯಿತು. ಆದರೆ, ಇವೆಲ್ಲ ಪ್ರಸಿದ್ಧಿ-ಸಂಪತ್ತುಗಳಿಂದ ವಿಮುಖನಾದ ಪೆರೆಲ್ಮನ್, ''ನಾನು ಸಮಸ್ಯೆಗಳನ್ನು ಪರಿಹರಿಸುವುದು ಮನಃಸಂತೋಷಕ್ಕಾಗಿ. ದುಡ್ಡಿನ ಆಸೆ ನನಗಿಲ್ಲ'' ಎಂದು ಯಾರನ್ನೂ ಒಳಬರಗೊಡದೆ, ಯಾರಿಗೂ ಸಂದರ್ಶನ ಮಾಡಲು ಅನುಮತಿ ಕೊಡದೆ ಮನೆಯೊಳಗೆ ಉಳಿದುಕೊಂಡುಬಿಟ್ಟ!

''ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಮೂಲ ಹಣ. ಅದಿಲ್ಲದ ಪ್ರಪಂಚ ರೂಪುಗೊಳ್ಳಬೇಕು'' ಎನ್ನುವುದೇ ಪೆರೆಲ್ಮನ್ ನುಡಿ. ಕೈಯಲ್ಲಿ ಕೆಲಸವಿಲ್ಲದ ಸಮಯದಲ್ಲಿ ಒಮ್ಮೆ ಅವನಿಗೆ ಯಾವುದಾದರೂ ಉದ್ಯೋಗ ಹಿಡಿಯಬೇಕು ಅನ್ನಿಸಿತು. ಇನ್ನೊಂದು ಬೀದಿಯಲ್ಲಿರುವ ಬೇಕರಿಗೆ ಹೋಗಿ ಅದರ ಮಾಲೀಕನನ್ನು ಭೇಟಿಯಾದ. ''ಏನಾದರೂ ಕೆಲಸ ಕೊಡಿ'' ಎಂದು ಕೇಳಿಕೊಂಡ.

''ಸಂಬಳ ಎಷ್ಟು ಕೊಡಬೇಕು?'' ಬೇಕರಿಯವನ ಪ್ರಶ್ನೆ.

''ಇಲ್ಲ, ಒಂದು ದುಗ್ಗಾಣಿಯೂ ಬೇಡ. ದುಡ್ಡಿಲ್ಲದ ಪ್ರಪಂಚದಲ್ಲಿ ಬದುಕಬೇಕೆಂದು ನನ್ನ ಅಪೇಕ್ಷೆ,'' ಪೆರೆಲ್ಮನ್‌ನ ಖಚಿತ ನುಡಿ.

''ಸರಿ ಹಾಗಾದರೆ, ಗಣಿತವೂ ಅಲ್ಪಸ್ವಲ್ಪ ಬರುತ್ತೆ ಅನ್ನುತ್ತೀಯ. ನಿನಗೆ ಕ್ಯಾಶಿಯರ್ ಕೆಲಸ ಕೊಡುತ್ತೇನೆ'' ಎಂದು ಬೇಕರಿಯವನು ಅವನಿಗೆ ಕೆಲಸ ಕೊಟ್ಟ. ಆದರೆ ಸ್ವಲ್ಪ ಹೊತ್ತಲ್ಲೇ ಅವನಿಗೆ ತಾನೆಂಥ ಪ್ರಮಾದವೆಸಗಿದ್ದೇನೆಂದು ಗೊತ್ತಾಯಿತು. ಪೆರೆಲ್ಮನ್ ಗ್ರಾಹಕರಿಗೆ ಬೇಕಾದ ತಿಂಡಿತಿನಿಸುಗಳನ್ನು ಕೊಟ್ಟರೂ ದುಡ್ಡು ಮಾತ್ರ ಪಡೆಯುತ್ತಿರಲಿಲ್ಲ, ತುಂಬ ಅನುನಯದಿಂದ ನಗುತ್ತ ''ದುಡ್ಡು ಕೊಡಬೇಡಿ'' ಎಂದು ಹೇಳುತ್ತಿದ್ದ. ಬೇಕರಿ ಮಾಲೀಕ ಬಂದು ನೋಡಿದಾಗ, ಕ್ಯಾಶ್‌ಕೌಂಟರಲ್ಲಿ ಆರ್ಡರ್ ಮಾಡಲು ಒಂದು ಉದ್ದನೆ ಸಾಲು ಆಗಲೇ ಸಿದ್ಧವಾಗಿ ನಿಂತಿತ್ತು!

## ಸಾವು ತುಂಬಿದ ಹುರುಪು

ಆರ್ಕಿಮಿಡೀಸ್ ಕೇವಲ ಗಣಿತಜ್ಞ ಮಾತ್ರನಾಗಿರದೆ, ಯುದ್ಧವಿದ್ಯೆಯಲ್ಲೂ ಪಳಗಿದ್ದ ತಂತ್ರಜ್ಞ. ರೋಮನ್ನರು ತನ್ನ ಊರನ್ನು ಸುತ್ತುವರಿಯುತ್ತಿದ್ದಾರೆನ್ನುವ ಸೂಚನೆ ಸಿಕ್ಕಿದಾಗ

ಅವರನ್ನು ಹಿಮ್ಮೆಟ್ಟಿಸಲು ಅವನು ಹಲವಾರು ತಂತ್ರಗಳನ್ನು ಹೆಣೆದಿದ್ದನಂತೆ. ದೊಡ್ಡ ಗಾಜಿನ ಮಸೂರಗಳನ್ನು ಮಾಡಿ, ರೋಮನ್ ಹಡಗುಗಳ ಮೇಲೆ ಸೂರ್ಯರಶ್ಮಿಯನ್ನು ಕೇಂದ್ರೀಕರಿಸಿ ಅವು ದಡ ಸೇರುವ ಮೊದಲೇ ಸುಟ್ಟು ಹೋಗುವಂತೆ ವ್ಯವಸ್ಥೆ ಮಾಡಿದ್ದನೆಂದು ಹೇಳುತ್ತಾರೆ. ಆದರೆ, ಈ ಎಲ್ಲ ಅಡ್ಡಿ ಆತಂಕಗಳನ್ನು ಎದುರಿಸಿ ರೋಮನ್ ಪಡೆ ಕೊನೆಗೂ ಸಿರಾಕ್ಯೂಸ್ ಪಟ್ಟಣವನ್ನು ಮುಟ್ಟಿತು.

ರೋಮನ್ನರ ಸೇನಾಧಿಪತಿಯಾಗಿದ್ದ ಮಾರ್ಸೆಲಸ್‌ಗೆ ಆರ್ಕಿಮಿಡೀಸ್‌ನ ಬುದ್ಧಿಮತ್ತೆಯ ಬಗ್ಗೆ ತಿಳಿದಿತ್ತು. ಮಾತ್ರವಲ್ಲ ಆ ಮೇಧಾವಿಯ ಮೇಲೆ ಗೌರವಭಾವನೆಯೂ ಇತ್ತು. ಅವನು ಆರ್ಕಿಮಿಡೀಸ್‌ನನ್ನು ಭೇಟಿಯಾಗುವ ಇಚ್ಛೆಯಿಂದ ಅವನನ್ನು ಕರೆತರಲು ತನ್ನ ಸೈನಿಕರಿಗೆ ಹೇಳಿಕಳಿಸಿದ. ಸೈನಿಕರು ಆರ್ಕಿಮಿಡೀಸ್‌ನ ಮನೆಗೆ ಬಂದಾಗ, ಅವನ್ಯಾವುದೋ ಗಣಿತ ಸಮಸ್ಯೆಯಲ್ಲಿ ಮುಳುಗಿ ಹೋಗಿದ್ದನಂತೆ. ''ನಾನು ಕರೆಯುವವರೆಗೂ ಬರತಕ್ಕದ್ದಲ್ಲ'' ಎಂದು ಅವನು ಹೇಳಿದ್ದು ಸೈನಿಕರಿಗೆ ಅಹಂಕಾರದ ಮಾತಂತೆ ಕೇಳಿಸಿತು. ಒಬ್ಬ ಸೇನಾನಿಯಂತೂ ದರ್ಪದಿಂದ ಏರಿಹೋಗಿ ಆರ್ಕಿಮಿಡೀಸ್‌ನನ್ನು ಕೊಂದೇಬಿಟ್ಟ! ತನ್ನ ಜೀವಮಾನವಿಡೀ ಬುದ್ಧಿಯ ಬಲದಿಂದ ಬದುಕಿದ ಮೇರು ಗಣಿತಜ್ಞ 75ನೆಯ ವಯಸ್ಸಿನಲ್ಲಿ ಬುದ್ಧಿಗೇಡಿ ಸೈನಿಕನಿಂದ ತೀರಿಕೊಳ್ಳುವಂತಾಯಿತು.

ಸೋಫೀ ಜರ್ಮೇನ್ ಎಂಬ 13 ವರ್ಷದ ಹುಡುಗಿ ಈ ಕತೆಯನ್ನು ಓದಿ ತಲ್ಲಣಿಸಿಬಿಟ್ಟಳು. ಆಗುವುದಾದರೆ ತಾನು ಗಣಿತಜ್ಞೆಯೇ ಆಗಬೇಕೆಂದು ಆ ಕ್ಷಣವೇ ನಿರ್ಧರಿಸಿಬಿಟ್ಟಳು! ''ಒಬ್ಬ ವ್ಯಕ್ತಿಯನ್ನು ಸಾವೇ ಬಾಗಿಲಲ್ಲಿ ನಿಂತು ಅಣಕಿಸುವಾಗಲೂ ಅತ್ತ ನೋಡದಂತೆ ಹಿಡಿದು ಕೂರಿಸುವ ಶಕ್ತಿ ಗಣಿತಕ್ಕೆ ಇದೆಯಾದರೆ, ಅದು ನಿಜವಾಗಿಯೂ ಅದ್ಭುತ ವಿಷಯವೇ ಆಗಿರಬೇಕು!'' ಎಂದು ಬಾಲಕಿ ತರ್ಕಿಸಿದ್ದಳು! ಮುಂದೆ ತನ್ನ ಸಂಕಲ್ಪಕ್ಕೆ ತಕ್ಕಂತೆ ಎಲ್ಲ ಸಂಕಷ್ಟಗಳನ್ನು ಎದುರಿಸಿಯೂ ಸೋಫೀ ಜಗತ್ತಿನ ಶ್ರೇಷ್ಠ ಗಣಿತಜ್ಞರ ಸಾಲಲ್ಲಿ ನಿಲ್ಲಬಲ್ಲಂತಹ ಕೆಲಸ ಮಾಡಿದಳು.


## ಸರ್ವವ್ಯಾಪಿ

ಗಣಿತದಲ್ಲಿ ಅತ್ಯಂತ ಮುಖ್ಯ ಮೂರು ಬೆಲೆಗಳನ್ನು ತಿಳಿಸಿ ಎಂದರೆ, ಬಹುಶಃ ಜಗತ್ತಿನ ಎಲ್ಲರ ಪಟ್ಟಿಯಲ್ಲೂ ಪೈ ಇದ್ದೇಇರುತ್ತದೆ! ವೃತ್ತದ ಪರಿಧಿಯನ್ನು ವ್ಯಾಸದಿಂದ ಭಾಗಿಸಿದರೆ ಸಿಗುವ ಬೆಲೆಯೇ ಪೈ. ಇದರ ಬೆಲೆ 3 ಎಂದು ಬೈಬಲ್ ಹೇಳಿತು. 3ರಿಂದ 4ರ ನಡುವೆ ಇರುತ್ತದೆಂದು ಆರ್ಕಿಮಿಡೀಸ್ ಹೇಳಿದ. ಅಲ್ಲದೆ, ಅದರ ಬೆಲೆಯನ್ನು ನಿಷ್ಕೃಷ್ಟವಾಗಿ ತಿಳಿಸಲು ಆ ಕಾಲದ ಅತ್ಯುನ್ನತ ಪ್ರತಿಭೆಯ ವ್ಯಕ್ತಿಯೊಬ್ಬ ಮಾಡಬಹುದಾಗಿದ್ದ ಎಲ್ಲ ಸಾಹಸಗಳನ್ನೂ ಆರ್ಕಿಮಿಡೀಸ್ ಮಾಡಿದ!

ಪೈ ಬೆಲೆಯ ವಿಶೇಷತೆ ಇರುವುದು ಅದು ಗಣಿತದ ವಿವಿಧ ಶಾಖೆಗಳಲ್ಲಿ ತೋರುವ ಬಹುರೂಪತೆಯಲ್ಲಿ. ಬಫೋನ್‌ನ ಸೂಜಿ ಪ್ರಯೋಗ ಎಂಬ ಒಂದು ಪ್ರಶ್ನೆಯಲ್ಲಿ, ಅದು ವೃತ್ತ

ಅಥವಾ ಅನಂತಸರಣಿಗಳಿಗೆ ಯಾವ ರೀತಿಯಲ್ಲೂ ಸಂಬಂಧಿಸಿಲ್ಲವೆನಿಸಿದರೂ ಉತ್ತರದಲ್ಲಿ ಪೈ ಕಾಣಿಸಿಕೊಳ್ಳುತ್ತದೆ! ಗಣಿತದಲ್ಲಿ ''ಜೀವವಿಮಾ ಗಣಿತ'' ಎಂಬ ಶಾಖೆಯಿದೆ. ಒಂದು ಜನಸಮುದಾಯದಲ್ಲಿ, ನಿರ್ದಿಷ್ಟ ಕಾಲಾನಂತರ ಎಷ್ಟು ಜನ ಬದುಕುಳಿಯುತ್ತಾರೆ ಎನ್ನುವುದನ್ನು ಅಂದಾಜಿಸುವ ವಿಲಕ್ಷಣ ವಿಜ್ಞಾನ ಇದು! ಇದಕ್ಕೆ ಸಂಬಂಧಿಸಿದ ಒಂದು ಪ್ರಶ್ನೆಯನ್ನು ಗಣಿತಜ್ಞ ಡಿಮೋರ್ಗನ್‌ನಲ್ಲಿ ಒಬ್ಬ ಕೇಳಿದಾಗ, ಮೋರ್ಗನ್ ಕೊಟ್ಟ ಉತ್ತರದಲ್ಲಿ ಪೈ ಇತ್ತಂತೆ. ಆಗ ಪ್ರಶ್ನೆ ಕೇಳಿದ ವ್ಯಕ್ತಿ ''ಸ್ವಾಮಿ! ಒಬ್ಬ ವ್ಯಕ್ತಿಯ ಹುಟ್ಟು ಸಾವಿಗೂ ಈ ಪೈಗೂ ಏನು ಬಾದರಾಯಣ ಸಂಬಂಧ? ನಿಮಗೆಲ್ಲೋ ತಲೆ ಸಂಪೂರ್ಣ ಕೆಟ್ಟಿದೆ!'' ಎಂದು ಜಗಳ ಕಾದನಂತೆ.

✷




'ಅಭಿಯಾನ' ಶುರುವಾಗುವುದಕ್ಕಿಂತ ಮೊದಲು ತಲೆ ಮೇಲೆ ಹೊತ್ತು ಮಾರುತ್ತಿದ್ದೆ.... ಈಗ ಲಾರಿ ತಗೊಂಡೆ...

# ಮುತ್ತಿನ ಮಾತು

**- ಭೂಮಿತಾಯಿ**

**ಕಿ**ಸ್ ಕಿಸ್‌ನೆ ಕಿಸ್‌ಕಿಸ್‌ಕೊ ಕಿಸ್ ಕಿಯಾ? ಅಂತ ಆ ಹುಡುಗಿ ಕೇಳುದ್ರೊಳಗ ಒಂದಿಬ್ಬರು ಹುಡುಗೂರು ಕಿಸಕ್ಕನೆ ನಕ್ಕೊಂಡು ಹೋದ್ರು.

ಅಲ್ಲಾ, ಇದೆಂಥ ಪ್ರತಿಭಟನೆ ಅಂತೀನಿ? ತುಟಿಗೆ ತುಟಿ ಒತ್ತಿ ಯಾರರೆ ಪ್ರತಿಭಟನೆ ಮಾಡ್ತಾರ? ಯಾರು ಯಾರಿಗೆ ಒತ್ತ ಬೇಕು? ಎಷ್ಟು ಮಂದಿಗೆ ತುಟಿಮುದ್ರಿ ಹಾಕಬೇಕು? ಎಣಿಸಬೇಕೋ, ಎಣಿಸಬಾರದೋ?

**ಈ ತುಟಿ ಬಿಗಿಯುವ ಮಾತು ಬಂದಾಗ ಬಹುಶಃ ಪ್ರತಿಭಟನೆಯ ಪರಿಕಲ್ಪನೆ ಬದಲಾಗೇದ ಅಂತ ಅನ್ನಸ್ತದ.**

ನೈತಿಕ ಪೊಲೀಸ್‌ಗಿರಿ ಮಾಡೋರು ಕೈ ಕೈ ಹಿಡ್ಕೊಂಡು ಅಡ್ಡಾಡೋರಿಗೆ ಬಾಯ್ಮುಚ್ಚಿಕೊಂಡು ಇರ್ರೆಪಾ... ಅಂದಿದ್ದ ತಪ್ಪಾತು... ಇವರು ಹಿಂಗ ಬಾಯಿ ಮುಚ್ಲಿಕತ್ಹಾರ ನೋಡ್ರಿ..

ಥೇ ನೋಡೂದೇನ್ರಿ? ಮತ್ತ ಏನ್ಮಾಡೂದು? ಅವರೆಲ್ಲ ಖರೇನೆ ಒಂದೊಂದು ಮುತ್ತಾ ಕೊಡ್ತಾರೋ, ಇಲ್ಲಾ ಕೊಡ್ಕೊಂತನೇ ಇರ್ತಾರೋ ಅನ್ನೂದೇ ತಿಳೀವಲ್ದು.

ಇಷ್ಟಕ್ಕೂ ನಮಗೆಲ್ಲ ಗೊತ್ತಿದ್ದಿದ್ದು ಪ್ರೀತಿಯ ಮುತ್ತಂದ್ರ ಅವ್ವಾ ತನ್ನ ಎಳೀ ಕೂಸಿಗೆ ಕೊಡೂದು. ಎಳೀ ಬೆರಳು ತುಟಿ ಸಂದೀಲೆ ಕಡ್ಕೊಂತ ಮುತ್ತಿಡೂದು. ಮುದ್ ಮಾಡೂದು ಅಂದ್ರ ಅಮ್ಮ ಅಪ್ಪನ ಹತ್ರ ಪ್ರೀತಿ ಮಾಡಸ್ಕೊಳ್ಳೂದು ಗೊತ್ತಿತ್ತು. ವಿರೋಧ ವ್ಯಕ್ತಪಡಸೂದು ಹಿಂಗ?

'ಕಿಸ್ಮತ್ ಕಿಸ್‌ಮತ್‌ಕಿ ಬಾತ್ ಹೈ' ಅಂತ ನಮ್ಮನಿ ಅಜ್ಜ ಇರಲಾರದ ಹಲ್ಲು ಕಿಸದು ಕಿಸ್ಮಾತ್ ಹೇಳಿತ್ತು.

ಹಂಗ ನಕ್ಕೊಂತ ಕೇಳಿದ್ರು, 'ಮೈ ಕಿಸ್ಮತ್ ಆಜ್ಮಾಂವು' ನಾವು ಅವರಷ್ಟೇ ಜೋರೆ ನಕ್ಕು ಹೇಳಿದ್ವಿ. 'ಆಪ್ ಕಿಸ್ ಮತ್ ಆಜ್ಮಾಯಿಯೆ... ದಾಂತ್‌ಕೆಲಿಯೆ ಹಾನಿಕಾರಕ್ ಹೈ.'

ಈ ಕಿಸ್ಸು, ಕಿಸ್ಮತ್ತು ಎರಡನ್ನೂ ದೂರಿಟ್ಟು ಮಾತಾಡೂನು... ಕಿಸ್ ಅನ್ನೂದ್ರೊಳಗೇ ಒಂಥರಾ ಕಸರ ಐತ್ರಿ. ಬೇಕಾದ್ರ ಒಮ್ಮೆ ಜೋರಗೆ ಅಂದು ನೋಡ್ರಿ... ಕಿಸ್ ಅದೇ ಒಮ್ಮೆ ಕನ್ನಡದೊಳಗ ಮುತ್ತು ಅಂದು ನೋಡ್ರಿ, ಕೊಟ್ಟಷ್ಟೇ ಮತ್ತು ಬರ್ತದ. ಯಾಕಂದ್ರ ಇಲ್ಲಿ ತುಟಿಗೆ ತುಟಿ ಅಂಟ್ತಾವ. ಹಂಗಾಗಿ ಮುತ್ತಿನ ವಿಚಾರನ ಭಾಳ ಛೊಲೊ.

ಹೆಣ್ಮಕ್ಕಳಿಗೆ ಅಂತೂ ಕೊಡು ತೊಗೊಳ್ಳುವ ಮುತ್ತಿಗಿಂತ, ಉಡುವ ತೊಡುವ ಮುತ್ತಂದ್ರ ಭಾಳ ಇಷ್ಟ. ಮುತ್ತಿನಷ್ಟೇ ಬೆಳ್ಳಗ ಹೊಳಿಯೂ ನಗಿ ಚಲ್ತಾರ ಕೊಟ್ಟು ನೋಡ್ರಿ, ಒಂದು ಮುತ್ತಿನ ಸರ... ಹಿಂಗನ್ನೂತ್ಲೆ, ನಮ್ಮಾವ, ಅಯ್ಯ, ಬಿಡ, ಯವಾಗೂ ಕಾಣೂ ಹಲ್ಲಿಗ್ಯಾಕ ಮುತ್ತಿನ ಸರ ಕೊಡಬೇಕು ಅನ್ನೂದ? ಮಾಮಿ ಹಲ್ಲು ಒಂಚೂರು ಬಾಯಿಬಿಟ್ಟು ಹೊರಗಿದ್ದವು. ಮುತ್ತಿನ ಸರದ ಮಾತು ಹಿಂಗ ಬಾಯಿಕಟ್ಟಿಹಾಕಿತ್ತು. ಅವರ ಮುತ್ತೇನಾತು ಅಂತ ಮಾತ್ರ ಕೇಳಾಕ ಆಗ್ಲಿಲ್ಲ ನೋಡ್ರಿ.

ಈ ತುಟಿ ಬಿಗಿಯುವ ಮಾತು ಬಂದಾಗ ಬಹುಶಃ ಪ್ರತಿಭಟನೆಯ ಪರಿಕಲ್ಪನೆ ಬದಲಾಗೇದ ಅಂತ ಅನ್ನಸ್ತದ. ತುಟಿ ಕಚ್ಚಿ ಅವುಡುಗಚ್ಚಿ ಎದುರಸಬೇಕು ಅನ್ನೂದನ್ನೇ ಇವರು ತಮ್ಮುವು ಬಿಟ್ಟು, ಮಂದೀವು ಮಾಡ್ಯಾರ ಅಂತ ಅನ್ನಸ್ತದ.

ಯಾರರೆ ಏನರೆ ಮಾಡ್ಲಿ, ಮಾಧ್ಯಮದೋರು ಮಾತ್ರ ತುಟಿಗೆ ತುಟಿ ಹಚ್ಚದೇ ವಟಾವಟಾವಟಾ ಅಂತ ಮಾತಾಡ್ತಾರ. ಪಾಪ, ತುಟಿ ಒಣಗಿದ್ರೂ, ತಮ್ಮ ನಾಲಗಿಯಿಂದ ಹಸಿ ಮಾಡ್ಕೊಳ್ಳಾಕ ಆಗಲಾರದೋರು, ಈಗ ಮಂದಿ ತುಟಿಮುದ್ರಿ ಬಗ್ಗೆ ಮಾತಾಡ್ಲಿಕ್ಕೆ ಹತ್ಯಾರ.

ಹುಡುಗ್ಯಾರೂ ಏನು ಕಡಿಮಿಲ್ಲ ನೋಡ್ರಿ, ತಮ್ಮ ತುಟೀನ ಹತ್ಯಾರ ಮಾಡ್ಕೊಂಡಾರ.

ಮಜಾ ಅಂದ್ರ ನೈತಿಕ ಪೊಲೀಸ್‌ಗಿರಿ ವಿರೋಧಿಸಿ ಮಾಡುವ ಈ ಕೃತ್ಯವನ್ನು ನೈಜ ಪೊಲೀಸ್‌ಗಿರಿ ರಕ್ಷಣಾ ಬೇಲಿ ಬೇಕಂತ ಕೇಳ್ತಾರ. ಬೇಲಿನ ಹಾರಿದೋರಿಗೆ ಮತ್ತೊಂದು ಬೇಲಿ ಹಾಕೂದು... ಖರೆ ಕಲಿಯುಗ ನೋಡ್ರಿ ಇದು.

ನಮ್ ಕಡೆ ಹೆಣ್ಮಕ್ಕಳಿಗೆ ಇದನ್ನ ಪ್ರತಿರೋಧ ತೋರುವ ಅತಿ ಖತರ್‌ನಾಕ್ ಹತ್ಯಾರ ಅಂತನೇ ಹೇಳಿದ್ರು. ಏನೇ ಮಾತು ಬಂದ್ರು, ನಿಮ್? ತುಟಿ ಕಚ್ಚಿ ನಡೀಬೇಕು. ತುಟಿಯಿಂದಾಚೆ ಒಂದು ಶಬ್ದ ಹೊರಗ ಹೋಗಬಾರದು. ಹಂಗ ತಡಕೊಂಡೋರು ಗೆದೀತಾರ ಅಂತ ಮ್ಯಾಲೆ ಮ್ಯಾಲೆ ಹೇಳೋರು. ತಿರಗಿ ಮಾತಾಡಬ್ಯಾಡ್ರಿ ಅಂತ ಹೇಳೂದನ್ನೇ ಹಿಂಗ ಸುತ್ತೀಬಳಸಿ ಹೇಳ್ತಿದ್ರು. ಈಗ ನೋಡ್ರಿ ತಿರುತಿರುಗಿ ತುಟಿ ಕಚ್ಚೂ ಮಾತಾಗ್ತಾವ.

ಇಷ್ಟಕ್ಕೂ ಅವರು ಯಾರದರೆ ತುಟಿ ಕಚ್ಲಿ, ನಮ್ಮದೇನು ನಷ್ಟ? ಕಷ್ಟನೂ ಇಲ್ಲ... ಏ...ಮಾತು ಯಾಕ ತುಟಿ ಮೀರಿ ಹೊರಗ ಬರಾಕತ್ಯಾವ ನೋಡ್ರಿ...

ಅಲ್ಲೀ ಇಲ್ಲೀ ಸುತ್ತೂದು ಬ್ಯಾಡ. ಸೀದಾ ಸೀದಾ ಒಂದ ಮಾತಾಡೂನು, ತುಟಿ ಕಚ್ಚೆ ಬೆಸೀದೆನೂ ಪ್ರೀತಿ ಮಾಡೂದು ಬೇಕಾಗೇದ. ಪ್ರೀತಿ ಅನ್ನೂದಕ್ಕಿಂತ ಇನ್ನೊಬ್ಬರ ಬಗ್ಗೆ ಸಹನೆ ಹುಟ್ಟಬೇಕಾಗೇದ. ಅದಕ್ಕ ಪರಸ್ಪರ ಗೌರವ, ಪರಸ್ಪರ ಸ್ವೀಕಾರ್ಹ ಮನೋಭಾವ ಎರಡೂ ಬಣದೊಳಗೂ ಮೂಡಬೇಕಾಗೇದ. ಆಗಷ್ಟೇ ಈ ಪ್ರೀತಿ ಅನ್ನೂ ಮುತ್ತು, ನಮ್ ಹಣಿ ಮ್ಯಾಲೆ, ಕೆನ್ನಿ ಅಂಚಿಗೆ, ನಡು ನೆತ್ತಿ ಮ್ಯಾಗ, ಮುಂಗೈ ಮ್ಯಾಲೆ ಮುದ್ರಿ ಒತ್ತಬಹುದು. ಇಲ್ಲಾಂದ್ರ ಅದರೊಳಗ ಪ್ರೀತಿನೂ ಇರೂದಿಲ್ಲ, ಮುತ್ತುನೂ ಇರೂದಿಲ್ಲ. ಈ ಮುತ್ತಿನ ಮಾತು ಮುತ್ತಿನಂಥ ಮಾತಾಗುದಿಲ್ಲ.

✷

**ಅವಕಾಶ**

ಕೊಟ್ಟಿದ್ದಾರೆ ಒಬ್ಬೊಬ್ಬರಿಗೆ ಹದಿನೆಂಟು ತಿಂಗಳು
ಆದಷ್ಟು ಬೇಗ ತಿಂದು ತೇಗಲು
ಆದರೆ ಉಳಿಸಿರಬೇಕು ಅಷ್ಟಿಷ್ಟನ್ನಾದರೂ
ಉಳಿದವರು ಬಂದು ತಿಂದು ತೇಗಲು
ಸಿಕ್ಕಿದವರಿಗೆ ಸೀರುಂಡೆ ಅಧ್ಯಕ್ಷ ಗಿರಿ
ಮಿಕ್ಕಿದವರಿಗೆ ಬರೀ ಹೊಟ್ಟೆ ಉರಿ

# Advertisement

# Advertisement

# ಕರ್ನಾಟಕ ವೈಭಯ!

- ಗಣೇಶ ಹೆಗ್ಗಡೆ

"ಒಳ್ಗೇ ಬನ್ನಿ ಸುಂದ್ರಮ್ಮ, ನೀವು ಮನೆಗೆ ಬಂದು ಎಷ್ಟು ದಿವ್ಸ ಆಯ್ತು?"

"ಪರ್ವಾಗಿಲ್ಲ ಬಿಡಿ ಪದ್ಮಮ್ಮ. ಕಾಂಪೌಂಡಿನಲ್ಲೇ ನಿಂತು ಮಾತ್ನಾಡೋದು ಸೇಫು. ಇವ್ರು ಬ್ಯಾರೆ ವರಾಂಡದಲ್ಲಿ ಒಬ್ರೇ ಕುಳಿತು ಪೇಪರ್ ಓದುತ್ತಾ ಇದ್ದಾರೆ. ಪ್ರಾಣೀಗೆ, ಯಾರು ಒಳ್ಗೆ ಬಂದ್ರು.... ಹೋದ್ರು ಅನ್ನೋದೇ ಗೊತ್ತಾಗಲ್ಲ. ಅಂದಹಾಗೆ ನಿಮ್ಮೆಜಮಾನ್ರು ಈಗ ಹ್ಯಾಗಿದ್ದಾರ್ರೀ? ನಾಲ್ಕು ತಿಂಗಳಿನಿಂದ ತೀರಾ ಮಂಕಾಗಿದ್ದಾರೆ. ವಿ.ಆರ್.ಎಸ್.ಗೆ ಅಪ್ಲೈ ಮಾಡಿ ರಜದ ಮೇಲಿದ್ದಾರೆ ಅಂತಿದ್ರಿ?"

**ಯಜಮಾನ್ರು ನಾಲ್ಕು ತಿಂಗಳಿಂದ ಮಂಕಾಗಿರಲು ಕಾರಣ?**

"ಯಾಕೋ ನನ್ನ ಗ್ರಹಚಾರಾನೇ ಸರಿಯಿಲ್ಲ ಸುಂದ್ರಮ್ಮ. ಒಮ್ಮೊಮ್ಮೆ, ಮಧ್ಯ ರಾತ್ರಿ ಇದ್ದಕ್ಕಿದ್ದಂತೆ ಎದ್ದು ಕುಳಿತು ಇವರು 'ಪದ್ದಿ, ಬಿಳಿ ಕಾಗದ ಪೆನ್ನು ತಂದ್ಕೊಡು ವಿಲ್ ಬರೆಯಬೇಕು. ಯಾವ ಸಮಯದಲ್ಲಿ ಏನಾಗುತ್ತೋ?' ಅಂತ ಕನವರಿಸ್ಕೊತಾ ಇರ್ತಾರೆ. ಎಂಥಹವರಿಗಾದ್ರು ಗಾಬರಿ ಆಗಲ್ವೇನ್ರೀ ಸುಂದ್ರಮ್ಮ?"

"ಆಗದೆ ಉಂಟೆ. ಎಲ್ಲಾದರೂ ಹೆದರಿಕೊಂಡಿದ್ದಾರೇನ್ರಿ ನಿಮ್ಮೆಜಮಾನರು. ಯೂನಿವರ್ಸಿಟೀಲಿ ಅಲ್ವೇನ್ರಿ ಅವ್ರು ಕೆಲ್ಸ ಮಾಡ್ತಿರೋದು. ಎಂಟು ಗುಂಡಿಗೆ ಜೀವ ಅವರದ್ದು ಅಂತಿದ್ರಿ. ಒಳ್ಳೇ ಕುಸ್ತಿಪಟು, ಕ್ಯಾಂಪಸ್ಸಿನಲ್ಲಿ ಯಾರಾದ್ರು ಹಾವುಗಳನ್ನು ಕಂಡ್ರೆ, ಹಿಡಿಯಕ್ಕೆ ಇವರನ್ನೇ ಕರೆಸ್ತಿರ್ತಾರೆ ಅಂತ ಹೇಳ್ತಿದ್ರಿ. ಇಂಥಾ ಧೈರ್ಯವಂತನಿಗೆ ಏನ್ರಿ ಬಂತು ದುರ್ಗತಿ?"

"ಬರೀ ಹಾವುಗಳನ್ನು ಹಿಡಿದು ಕೊಡ್ತಿದ್ರೆ ಆರಾಮವಾಗೇ ಇರ್ತಿದ್ರು ಸುಂದ್ರಮ್ಮ. ಅಲ್ಲಿನ ವಿಜಿಲೆನ್ಸ್ ಡಿಪಾರ್ಟ್‌ಮೆಂಟಿಗೆ ಇವರನ್ನು ವರ್ಗಾಯಿಸಿದ್ರು ನೋಡಿ ಅಲ್ಲಿ ಹೆಗ್ಗಣಗಳನ್ನು ಹಿಡಿಯೋಕೆ ಹೋಗಿ ಈ ಅವಸ್ಥೆ ತಂದ್ಕೊಂಡ್ರು ಅಂತ ಬಲವಾದ ಅನುಮಾನಾರಿ ನಂದು!"

"ವೈಸ್ ಚಾನ್ಸೆಲರ್‌ಗೇ ಕಂಪ್ಲೇಂಟು ಕೊಡ್ಬೇಕಿತ್ತು ನಿಮ್ಮೆಜಮಾನ್ರು."

"ಹಾಗಂತ, ಇವ್ರೂ ಪ್ರಯತ್ನ ಪಟ್ರೂರಿ. ಆದರೆ ಪರಪ್ಪನ ಅಗ್ರಹಾರಕ್ಕೆ ಇವರನ್ನು ಈ ಸ್ಥಿತೀಲಿ ಒಬ್ಬರನ್ನೇ ಕಳುಹಿಸುವುದಕ್ಕೆ ತುಂಬಾ ಭಯವಾಯ್ತೂರಿ."

"ಹೋಗ್ಲಿ ಬಿಡಿ ಪದ್ಮಮ್ಮ. ನಿಮ್ಮ ಮಗಳ ಮನೇಗಾದ್ರೂ ಹದಿನೈದು ದಿವ್ಸ ಕಳುಹಿಸಿ, ಮೊಮ್ಮಗಳ ಜತೆ ಹಾಯಾಗಿದ್ದು ಹೊಸ ಮನುಷ್ಯರಾಗಿ ಬರ್ಲಿ ನಿಮ್ಮವರು."

"ಆ ಪ್ರಯತ್ನವೂ ಆಯ್ತೂರಿ. ಟಿ.ವಿ. ಮಾಧ್ಯಮ, ಪತ್ರಿಕೆಗಳಲ್ಲಿ, ಶಾಲಾ ಬಾಲಕಿಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದ ವಿಚಾರಗಳಿಗೆ ಇವರು ತೀರಾ ಭಯ ವಿಹ್ವಲಗೊಂಡು ಒಂದು ದಿನ ಇವರು, ಮೊಮ್ಮಗಳು 'ಪಮ್ಮಿ'ಯ ಶಾಲೆಗೇ ಹೋಗಿ, 'ನಾನೂ ಮಗು ಜೊತೆ ಪ್ರತಿನಿತ್ಯ ಶಾಲೆಯ ಕೊಠಡಿಯಲ್ಲಿ ಕೂತ್ಕೋತೀನಿ, ಪರ್ಮಿಷನ್ ಕೊಡದಿದ್ರೆ ನಿಮ್ಮ

ಮ್ಯಾನೇಜ್‌ಮೆಂಟಿನ ಮೇಲೆ ಕೇಸು ಹಾಕ್ತೀನಿ' ಅಂತ ಸಿಕ್ಕಾಪಟ್ಟೆ ರಂಪಾಟ ಮಾಡಿದ್ರಂತೆ. ಅದೇ ರಾತ್ರಿ ಛಳಿ ಜ್ವರ ಬಂದು ಮುಸುಕುಹಾಕಿ ಮಲಗಿದವರು ರಾತ್ರಿ ಕನವರಿಕೆಯಲ್ಲಿ...

*'ಟ್ವಿಂಕಲ್ ಟ್ವಿಂಕಲ್ ಲಿಟ್ಲ್ ಸ್ಟಾರ್।*
*ಹೌ ಐ ಫಿಯರ್.. ಸೇಫ್ ಯು ಆರ್॥'*

ಅಂತ ಬಡಬಡಿಸ್ತಿದ್ರಂತೆ.''

''ವಿಚಾರ ಕೇಳಿದ್ರೇನೆ ಕರುಳು ಕಿವುಚಿ ಬರುತ್ತಲ್ರೀ ಪದ್ಮಮ್ಮ. ಆಮೇಲೆ?''

''ನಮ್ಮ ಮಗಳು, ಮರುದಿನ ಬೆಳಿಗ್ಗೆ ಅಪಾರ್ಟುಮೆಂಟಿನ ನೆರೆ ಹೊರೆಯವರು ಏಳುವುದಕ್ಕೆ ಮುಂಚೆ ಇವರನ್ನು ಸ್ಯಾಟ್‌ಲೈಟು ಬಸ್ ಸ್ಟಾಂಡಿಗೆ ಸ್ಕೂಟರಿನ ಮೇಲೆ ಕೂರಿಸಿಕೊಂಡು ಬಂದು ಬಸ್ಸು ಹತ್ತಿಸಿ, ಮೈಸೂರು ಸ್ಟಾಂಡಿನಲ್ಲಿ ಅಪ್ಪನ್ನ ತಪ್ಪದೇ ಇಳಿಸ್ಕೊಳ್ಳಿ ತುಂಬಾ ನೊಂದ್ಕೊಂಡಿದ್ದಾರೆ ಅಂಥ ಫೋನು ಮಾಡಿ, ವಾಪಸ್ಸು ಕಳುಹಿಸಿ ಬಿಟ್ಲೂರಿ..''

''ಅಳ್ಬೇಡಿ ಪದ್ಮಮ್ಮ. ದಯವಿಟ್ಟು ಸಮಾಧಾನ ತಂದ್ಕೊಳ್ಳಿ. ನಾನು ನಿಮ್ಮ ಅಕ್ಕ ಇದ್ದಹಾಗೆ. ಆ ದೇವ್ರು ನಮಗೊಂದು ದಾರಿ ತೋರಿಸೇ ತೋರಿಸ್ತಾನೆ. ಅಂದಹಾಗೆ, ನಿಮ್ಮೆಜಮಾನರನ್ನು ನೀವು 'ಆನಂದರತಿ' ಮಠದ ಸ್ವಾಮಿಗಳ ಹತ್ರ ಕರ್ಕೊಂಡು ಹೋಗಿ ತೀರ್ಥ ಹಾಕಿಸ್ರಿ. ಪರಿಹಾರ ಸಿಗುತ್ತೆ..''

''ಹಾಗೂ ಒಂದ್ವಾರದ ಹಿಂದೆ ಮಾಡ್ದೇರಿ. ನಾವು ಮಠದ ಬಾಗಿಲಿಗೆ ಹೋಗುವುದಕ್ಕೂ, ಸಿ.ಸಿ.ಬಿ. ಪೋಲಿಸರು ಮಹಾಸ್ವಾಮಿಗಳನ್ನು 'ಪುರುಷತ್ವ' ಪರೀಕ್ಷೆಗಾಗಿ ಆಂಬುಲೆನ್ಸಿನಲ್ಲಿ ಹೇರಿಕೊಂಡು ಹೋಗುವುದಕ್ಕೂ ಸಮವಾಯ್ತು. ಬಂದದಾರಿಗೆ ಸುಂಕವಿಲ್ಲವೆಂದು ವಾಪಸ್ಸು ಬಂದುಬಿಟ್ವೆವು.''

''ಅಕಟಕಟಾ, ಎಂಥಹ ಕೇಡುಗಾಲ ಬಂತ್ರಿ ಪದ್ಮಮ್ಮ. ಈ ಹಿಂದೆ ಮಠದ ಸ್ವಾಮಿಗಳು, ನಮ್ಮ ದೇಹದಿಂದ – ಆತ್ಮದ ಬಿಡುಗಡೆಗೆ ಮೋಕ್ಷ ಮಾರ್ಗದಲ್ಲಿ ನಾವು ಚಿಂತಿಸುವ ಬಗ್ಗೆ ಪ್ರವಚನ ನೀಡುತ್ತಿದ್ದರು. ಆದರೆ ಈಗ 'ಸ್ವಾಮಿ'ಗಳ ಬಿಡುಗಡೆಗೇ ಭಕ್ತರು ಪರದಾಡುವಂತಾಯ್ತಲ್ರೀ. ಹೋಗ್ಲಿ ಬಿಡಿ ನಿಮ್ಮ ತೌರೂರಾದ ಕಮಲಾಪುರಕ್ಕಾದ್ರೂ ಹೋಗಿ ನಿಮ್ಮವರ ಜೊತೆ ಹದಿನೈದು ದಿವ್ಸ ಇದ್ದು ಬನ್ರಿ. ಮನಸ್ಸು ತಿಳಿಯಾಗಿ ಆರೋಗ್ಯ ಸುಧಾರಿಸುತ್ತೆ.''

''ನಿಮ್ಗೆಲ್ಲೋ ಭ್ರಾಂತು ಸುಂದ್ರಮ್ಮ. ಹಾಗಂತ ಬಲವಂತ ಮಾಡಿದ್ದಕ್ಕೆ ನನ್ಮೇಲೇ ಸಿಟ್ಟಾಗಿ, ಮೂರು ದಿವ್ಸ ಊಟ–ತಿಂಡಿ ಬಿಟ್ಟು ದೂರ್ವಾಸ ಮುನೀ ಥರಹ ಕುಳಿತಿದ್ರು.''

''ಅಯ್ಯೋ ಶಿವನೇ? ಆ ಊರು ಏನು ಮಾಡಿದೇರಿ ಇವರಿಗೆ?''

''ಹದಿನೈದು ದಿವಸದ ಹಿಂದೆ ಕಮಲಾಪುರದ ತೆರೆದ ಬೋರ್‌ವೆಲ್ ಬಾವಿಗೆ ಇವರ ಚಿಕ್ಕಪ್ಪನ ಮೊಮ್ಮಗು ಬಿದ್ದು ಬದುಕಲೇ ಇಲ್ವಲ್ರೀ! ಆ ಶಾಕ್‌ನಿಂದ ಇವರು ಇನ್ನೂ ಹೊರಬಂದಿಲ್ಲಾರಿ. ರಾಜ್ಯದಲ್ಲಿ ಸುಮಾರು ಎಂಭತ್ತೈದು ಸಾವಿರ ಮುಚ್ಚಳ ಮುಚ್ಚದ ತೆರೆದ ಬೋರ್‌ವೆಲ್‌ಗಳಿವೆ ಎಂಬ ಸುದ್ದಿ ತಿಳಿದಾಗಿನಿಂದ ಇವ್ರು ಇನ್ನೂ ಹಣ್ಣಾಗಿದ್ದಾರೇರಿ. ಯಾರ್‍ಯಾರಿಗೋ ಫೋನ್ ಹಚ್ಚಿ ಇವತ್ತಿನ ಪ್ರೋಗ್ರೆಸ್ ಏನು ಅಂತ ತಿಳ್ಕೋತಾನೇ ಇರ್ತಾರೆ.''

''ಅನ್ನಭಾಗ್ಯ, ಶಾದಿಭಾಗ್ಯ, ದಂತಭಾಗ್ಯ ಅಂತೆಲ್ಲಾ ಸೌಲಭ್ಯ ಕೊಡೋ ಈ ಸರ್ಕಾರ ನಮಗೆ ಬದುಕುವ ಭಾಗ್ಯಾನೇ ಕೊಡ್ಲಿಲ್ಲವಲ್ರೀ ಪದ್ಮಮ್ಮ.''

''ನಿಜಾರಿ. ನೀವು ಯಾರಿಗೂ ಹೇಳಲ್ಲಾ ಅಂತಂದ್ರೆ ಒಂದು ಗುಟ್ಟಿನ ವಿಚಾರಾರಿ. ಮೊನ್ನೆ ಸ್ನಾನದ ಮನೆಯಲ್ಲಿ ಇವರೊಬ್ಬರೇ ನಿಂತು..

*'ಕರ್ನಾಟಕದಲ್ಲೊಂದು ಮನೆಯ ಮಾಡಿ*
*ಮಠ, ಸ್ವಾಮಿ, ಕಾಮಿ, ಶಿಕ್ಷಕ, ರಾಜಕಾರಣಿ ಮುಂತಾದವರಿಗೆ*
*ಅಂಜುವುದೊಡೆಂತಯ್ಯಾ*
*ಹರ ಹರ ಶ್ರೀ ಸಿದ್ದರಾಮೇಶ್ವರ!'*

ಅಂತ ಹಾಡ್ಕೊತಾ ಇದ್ರೂರಿ. ಇದು ಹುಚ್ಚು ಹಿಡಿಯುವ ಸಂಕೇತವೇನ್ರಿ?''

''ಖಂಡಿತಾ ಇಲ್ಲಾರಿ. ನನ್ನನ್ನು ನಂಬಿ ಪದ್ಮಮ್ಮ. ಇಷ್ಟರಲ್ಲೇ ಸರಿ ಹೋಗ್ತಾರೆ ನಿಮ್ಮೆಜಮಾನ್ರು. ನನ್ನದೊಂದು ಕಡೇ ಸಲಹೇರಿ. ಕನ್ನಡ ರಾಜ್ಯೋತ್ಸವದ ಅಂಗವಾಗಿ, ಕನ್ನಡ ಸಂಸ್ಕೃತಿ ಇಲಾಖೆಯವರು ಟೌನ್‌ಹಾಲಿನ ಮೈದಾನದಲ್ಲಿ ಒಂದು ವಾರ 'ಕರ್ನಾಟಕ ವೈಭವ' ಅಂತ ಸೌಂಡ್ ಅಂಡ್ ಲೈಟ್ ಪ್ರೋಗ್ರಾಂ ಹಮ್ಮಿಕೊಂಡಿದ್ದಾರೆ. ತಪ್ಪದೇ ಕರ್ಕೊಂಡು ಹೋಗ್ರಿ. ಅವರ ಮನಸ್ಸಾದ್ರೂ ತಿಳಿಯಾಗುತ್ತೇನೋ?''

''ಅಯ್ಯೋ ಸುಂದ್ರಮ್ಮ ನಿಮ್ ಕೈಲಿ ನಾನು ಹೇಳಿಸ್ಕೋಬೇಕೇನ್ರಿ. ನೆನ್ನೆ ಸಂಜೇನೆ ಇವರನ್ನು ಪುಸಲಾಯಿಸಿ ಆ ಪ್ರೋಗ್ರಾಂಗೆ ಇವರನ್ನು ಕರೆದುಕೊಂಡು ಹೋಗಿದ್ದೆ. ಪ್ರೋಗ್ರಾಂ ಅನೌನ್ಸರ್ ಒಬ್ಬ ಮೈಕು ಹಿಡಿದು ಅಚ್ಚ ಕನ್ನಡದಲ್ಲಿ (ಸಂಸ್ಕೃತಿ ಇಲಾಖೆಯವನೇ ಇರಬೇಕು) ಇನ್ನೇನು ''ಕರ್ನಾಟಕ ವೈಭಯ'' ಕೆಲವೇ ನಿಮಿಷಗಳಲ್ಲಿ ಆರಂಭವಾಗುತ್ತೆ ಅಂತ ಅನೌನ್ಸ್ ಮಾಡಿದಾಗ, ಇವರು ಇದ್ದಕ್ಕಿದ್ದಂತೆ ಬೆಚ್ಚಿಬಿದ್ದು, ಮೈ ಕೈ ಕೊಡವಿಕೊಂಡು, ಎದುರಿಗಿದ್ದ ಖಾಲಿ ಕುರ್ಚಿಯನ್ನು ಝಾಡಿಸಿ ಒದ್ದು, ಬಿರ ಬಿರನೆ ಮನೆ ಕಡೆ ಹೊರಟು ಬಿಟ್ರೂರಿ. ಅವಮಾನ ತಾಳಲಾರದೆ ನಾನೂ ಇವರನ್ನು ಕತ್ತಲೇಲಿ ಹಿಂಬಾಲಿಸಿ ಹೋಗ್ತಿದ್ದಾಗ, ರಸ್ತೇಲಿ ಜನ ನನ್ನನ್ನೇ ತಪ್ಪಾಗಿ ತಿಳಿದು ದುರ ದುರನೆ ನೋಡ್ತಾ ಇದ್ರೂರಿ. ಯಾವ ಹೆಂಗಸಿಗೂ ಇಂಥಹ ಸಂಕಷ್ಟ ಬರಬಾರ್ದೂರಿ.''

''ರೀ ಪದ್ಮಮ್ಮ ಯಾರೋ ಗಂಡಸರು ಕಿರುಚಿದ ಹಾಗೆ ಕೇಳಿಸ್ಲಿಲ್ವೇ? ನಿಮ್ಮೆಜಮಾನ್ರೇ ಇರ್ಬೇಕು ಬೇಗ ಹೋಗಿ ನೋಡ್ರಿ.''


''ಛೇ ಛೇ ನಮ್ಮೆಜಮಾನ್ರು ಮನೇಲೇ ಇಲ್ಲ ಸುಂದ್ರಮ್ಮ. ಅಸಲಿ ಅವ್ರು ತಮ್ಮ ಬಾಲ್ಯದ ಗುರುಗಳಾದ ಪ್ರೊ. ತೋಲಾಂಡರಾಯರ ಜತೆ ಧೈರ್ಯವಂತುಡು ಎಂಬ ತೆಲುಗು ಪಿಕ್ಚರ್‌ಗೆ ಹೋಗಿದ್ದಾರ್ರೀ.''

''ಹಾಗಾದ್ರೆ.. ಹಾಗಾದ್ರೆ.. ಕಿರುಚಿಕೊಂಡವರು ನಮ್ಮೆಜಮಾನ್ರೇನ್ರಿ? ಯಾವಾಗ್ಲೂ ಹೆಂಗಸರ ಮಾತನ್ನು ಕದ್ದು ಕೇಳಿಸಿಕೊಳ್ಳುವ ಚಟ ಇವರದ್ದು. ನಂಗೂ ವಕ್ಕರಿಸ್ಕೊಂಡ್ತೇನ್ರಿ ಈ ಗ್ರಹಚಾರ!''

✷

# ಕೊರವಂಜಿ ಪದಬಂಧ – 13

**- ವಿದ್ಯಾ ವಿ. ಹಾಲಭಾವಿ**




**ಎಡದಿಂದ ಬಲಕ್ಕೆ**

1. ತಂಬಾಕು ತಿನ್ನುವವನ ಬಳಿಯಿರುವ ಕಿರುಗತ್ತಿ (2)
3. ಇವನಿಗಂತೂ ಒಂಚೂರೂ ಅನುಭವವಿಲ್ಲ (5)
5. ಪದ ಹೇಳಿ ಪಡೆದುಕೊಂಡ ಡಿಗ್ರಿ (3)
7. ವಾನಪ್ರಸ್ಥ ಹೊರಟಿದ್ದೇಕೆ? ಮನೆ ಇಲ್ಲೇ ಇದೆ (4)
10. ನಸುಕಿನಲ್ಲಿನ ಕನಸು ನಿಜವಾಗಿದೆ (3)
11. ಒಪ್ಪವಾಗಿ ಬೆಸೆದುಕೊಂಡ ಸಂಬಂಧ (4)
12. ರಜವಿದ್ದಾಗಿನ ರಾತ್ರಿ (3)
15. ಸಮಯದ ಜೊತೆಗೆ ಉಚಿತವೂ ಸೇರಿಕೊಂಡಿದೆ (5)
16. ಹಗರಣದೊಳಗಿರುವ ಗುಂಪು (2)

**ಮೇಲಿಂದ ಕೆಳಕ್ಕೆ**

2. ಕೆಟ್ಟ ರೂಪವಿದು (3)
3. ಸೊಸೆಯಂದಿರು ಮೆಚ್ಚದಿರುವ ಪ್ರಾಣಿ (2)
4. ಮಾನವಂತ ಹತ್ತಿರುವ ಲೋಹದ ಹಕ್ಕಿ (3)
6. ಎಲ್ಲಾ ಕೆಲಸವೂ ನಿಧಾನವಾಗಿ ಸಾಗುವ ಸರ್ಕಾರಿ ಕಟ್ಟಡ (5)
7. ವಾರದೊಳಗೇ ಬಂದಿಹನಲ್ಲಾ ಈ ಬಾಧ್ಯಸ್ಥ (5)
8. ಪ್ರಸ್ತಾಪ ಮಾಡಿದ್ದನ್ನೇ ನೆಲೆಗೊಳಿಸಿದವ (3)
9. ಅರ್ಧ ಚಂದ್ರಾಕೃತಿಯ ರಚನೆ (3)
11. ಆಗಸದತ್ತ ಮುಖ ಚಾಚಿರುವ ಮಡಿವಾಳ (3)
13. ಯೋಗವಿದ್ದಾಗ ಕಾಣಿಸಿದ ವಿಶೇಷ ಸಮಿತಿ (3)
14. ಮಡಿವಂತ ನೀಡಿದ ಓಟು (2)

*(ಉತ್ತರಕ್ಕೆ 38ನೇ ಪುಟ ನೋಡಿ)*

# ಕದ್ದು ಕೇಳಿದ್ದು

**ಸ್ಥಳ: ಒಂದು ಹಾಪ್ ಕಾಮ್ಸ್ ತರಕಾರಿ ಮಳಿಗೆ**

**- ಸಿ.ಆರ್. ಸತ್ಯ**

ಬದನೇಕಾಯಿ : ಲೇ ಸೀಮೀ, ಹೊಸ ಸುದ್ದಿ ಏನು ಗೊತ್ತೇನೇ?

ಸೀಮೇಬದನೇಕಾಯಿ : ಇಲ್ಲ, ಏನು?

ಬದನೇಕಾಯಿ : ನಮ್ಮ ಈರುಳ್ಳಿಗೆ ಕೊನೆಗೂ ಮದುವೆ ಗೊತ್ತಾಯಿತಂತೆ.

ಸೀಮೇಬದನೇಕಾಯಿ : ಅಯ್ಯೋ ದೇವರೇ! ಆ ಗಂಡಾ ಆಗೋನ ಗತಿ ಏನೇ? ....ದಿನಾನೂ ಕಣ್ಣೀರು ಸುರಿಸೋದೇ!! ಯಾರು ಆ ಪಾಪಿ?

ಬದನೇಕಾಯಿ : ಇನ್ಯಾರು? ಅವಳ ಬಾಸಮ್ ಫ್ರೆಂಡು ಆಲೂಗೆಡ್ಡೆ. ಇಷ್ಟು ವರುಷಗಳು ಮದುವೆ ಮಾಡಿಕೊಳ್ಳದೆ ಚೆಲ್ಲಾಟ ಆಡ್ಕೊಂಡಿದ್ದರು. ಈಗ ಏನೋ ಸೀರಿಯಸ್ ಆಗಿ ಮದುವೆ ಮಾಡಿಕೊಳ್ಳುತ್ತಾರಂತೆ.

ಸೀಮೇಬದನೇಕಾಯಿ : ಅಯ್ಯೋ ನಾನು ನೋಡಿದೀನಿ ಬಿಡೇ ಅವರ ಚೆಲ್ಲಾಟ. ಮಸಾಲೆ ದೋಸೆ ಒಳಗೆ, ಮೈಸೂರ್ ಬೋಂಡಾ ಒಳಗೆ, ಚಾಟ್ ಒಳಗೆ ಎಲ್ಲರಿಗೂ ಕಾಣೋ ಹಾಗೆ ಕೈ ಕೈ ಹಿಡ್ಕೊಂಡು ನಾಚಿಕೆ ಇಲ್ಲದೇನೇ ಇರ್ತಾರೆ. ಸಧ್ಯ, ಇನ್ನು ಮೇಲೆ ಗಂಡ ಹೆಂಡತಿ ಅಂತನಾದ್ರೂ ಕರಿಸಿಕೊಳ್ಳಲಿ.

ಬದನೇಕಾಯಿ : ಏನು ಗಂಡಾ ಹೆಂಡತೀನೋ. ಇಬ್ಬರ ಸೈಜು ಒಂದೇ. ಆದರೆ ಅವಳ ಬಣ್ಣ ಏನೂ? ಆಲೂಗೆಡ್ಡೆ ಬಣ್ಣ ಏನೂ?

ಸೀಮೇಬದನೇಕಾಯಿ : ಬಣ್ಣ ಕಟ್ಕೊಂಡು ಏನಾಗ್ಬೇಕಿದೆ ಹೇಳು ಬದನೀ...? ಯಾಕೆ ನಮ್ಮ ಕ್ಯಾರೆಟ್ - ಮೂಲಂಗಿ ಮದುವೆ ಮಾಡಿಕೊಂಡಿದಾರಲ್ಲಾ, ಎಷ್ಟು ಸುಖವಾಗಿದಾರೆ! ಆದರೆ, ಅವರಿಗೆ ಹುಟ್ಟೋ ಮಕ್ಕಳು ನೋಡೋಕ್ಕೆ ಅವರ ತರಹ ಇದ್ರೂ, ಅವುಗಳ ಬಣ್ಣ ಹೇಗಿರುತ್ತೋ ಅಂತ ನನಗೂ ಒಂದೊಂದು ಸಲ ಯೋಚನೆ ಬರುತ್ತೆ.

ಬದನೇಕಾಯಿ : ಅಂದ ಹಾಗೆ, ಎಲ್ಲೇ ನಮ್ಮ ಅವರೀನೇ ಕಾಣ್ತಾ ಇಲ್ಲಾ..?

ಸೀಮೇಬದನೇಕಾಯಿ : ಯಾರು, ಅವರೇ ಕಾಳೇ? ಅವಳಿಗೆ ಇನ್ನೇನು ಸೀಸನ್ ಬಂತು. ಬರ್ತಾಳೆ ಬಿಡು. ಅಬ್ಬಬ್ಬ, ಹೋದ ವರುಷ ವಿಶ್ವೇಶ್ವರಪುರದಲ್ಲಿ ಅವರೆ ಕಾಳಿನ ಜಾತ್ರೆ ಅಂತ ಮಾಡಿಸ್ಕೊಂಡು ಅದೇನು

ಮರೆದಳಮ್ಮಾ, ಛೇ! ಛೇ!! ಅಂದ ಹಾಗೆ ಮೊನ್ನೆ ನಮ್ಮ ಕುಂಬಳಕಾಯಿ ಸಿಕ್ಕಿದ್ರು ಕಣೇ.

ಬದನೇಕಾಯಿ : ಹೌದಾ, ಹೇಗಿದಾರೆ ಆತ?

ಸೀಮೇಬದನೇಕಾಯಿ : ಇನ್ನೇನು, ಓವರ್ ವೈಟು, ಶುಗರ್ರು, ಬಿ.ಪಿ. ಅಂದ್ಕೊಂಡೇ ಇದಾರೆ. ನಾನು ನೋಡಿರೋ ಹಾಗೆ, ಆ ಹೊಟ್ಟೆ ಸೈಜು ವರ್ಷಾನುಗಟ್ಟಲೆ ಇದ್ದ ಹಾಗೇ ಇದೆ. ಅವರಾಯಿತು, ಬೂದುಗುಂಬಳಕಾಯಿ ಹುಳೀ ಆಯಿತು, ಮಜ್ಜಿಗೆ ಹುಳೀ ಆಯಿತು, ದಮ್ರೋಟ್ ಆಯಿತು, ಅಷ್ಟೇ!

ಡಯಟ್, ಗಿಯಟ್ ಅಂತ ಏನೂ ಐಡಿಯಾನೇ ಇಲ್ಲ ಆತಂಗೆ.

ಬದನೇಕಾಯಿ : ಲೇ ಸೀಮೇ, ಮೊನ್ನೆ ಕಾಫೀ ಡೇ ಹತ್ತಿರ ಗೋರೀಕಾಯಿ ಸಿಕ್ಕಿದ್ದ. ಏನು ಸಣ್ಣಗಾಗೋಗಿದಾನೆ ಗೊತ್ತಾ? ಮೈ ಎಲಬುಗಳೆಲ್ಲಾ ಎದ್ದು ಕಾಣುತ್ತಿದ್ವು.

ಸೀಮೇಬದನೇಕಾಯಿ : ಸರಿ, ಅವನು ಬಿಡು. ಅವನೂ, ಆ ಚಪ್ಪರದ ಅವರೆ, ಇನ್ನೊಬ್ಬ ಬಂಟ ಇದಾನಲ್ಲಾ ಅದೇ ನುಗ್ಗೇಕಾಯಿ ಇವರೆಲ್ಲಾ ಜಿಮ್‌ಗೆ ಹೋಗಿ ವರ್ಕ್ ಔಟ್ ಮಾಡ್ತಾರೆ ಕಣೇ. ಅದಕ್ಕೇ ಎಲ್ಲಾ ನರಪೇತಲ ನಾರಾಯಣಗಳಾಗಿದ್ದಾರೆ!

ಬದನೇಕಾಯಿ : ಇತ್ತೀಚೆಗೆ ಯಾಕೋ ಟೊಮ್ಯಾಟೋನೇ ಕಾಣುಸ್ತಿಲ್ಲಾ...?

ಸೀಮೇಬದನೇಕಾಯಿ : ಅವಳೇ?..., ಅವಳ ಬೆಲೆ ಮೇಲಕ್ಕೆ ಏರಿದ್ರೆ, ಮಾರ್ಕೆಟ್‌ಗೆ ಬರ್ತಾಳೆ. ಇಲ್ಲದಿದ್ದರೆ ಗೊಡೌನ್‌ನಲ್ಲೇ ಕೊಳೀತಾಳೆ. ಆದರೂ ಅವಳು ಅಂಗಡಿಗೆ ಬಂದರೆ ಎಲ್ಲರೂ ಅವಳನ್ನ ನೋಡೋರೇ! ಅದೇನು ರೂಪ! ಅದೇನು ಬಣ್ಣ! ಮೊನ್ನೆ ಅವಳ ಪಕ್ಕದ ಚೀಲದಲ್ಲಿದ್ದ ಆ ದಾಂಡಿಗ ಇದಾನಲ್ಲಾ ಅದೇ ಹಲಸಿನಕಾಯಿ ನೇರವಾಗಿ ಅವಳ ಕೆನ್ನೇಗೇ ಕೈಹಾಕಿ ಜುಗುಟಿ ಬಿಟ್ಟಾ ಕಣೇ!

ಬದನೇಕಾಯಿ : ಅವನೊಬ್ಬ, ಒಂದು ದಿನಾನಾದ್ರೂ ಲಕ್ಷಣವಾಗಿ ಶೇವ್ ಮಾಡ್ಕೊಂಡು ಇದ್ದದ್ದನ್ನು ನಾನಂತೂ ನೋಡಿಲ್ಲ. ಹಾಗೆ ನೋಡೋಕ್ಕೆ ಹೋದರೆ, ಆ ಸೀತಾಫಲ ಕತೇನೂ ಅಷ್ಟೆ. ಮೊನ್ನೆ, ಆ ಇನ್ನೊಬ್ಬ ದಾಂಡಿಗ ಇದಾನಲ್ಲ ಅದೇ ಪಡವಲಕಾಯಿ ಅವಳನ್ನ ಅಡ್ಡ ಕಟ್ಟಿ, ಹಿಚುಕಿ, ಹೊರಗಡೆ ವಡ್ಡ ವಡ್ಡಾಗಿದ್ದರೂ, ಒಳಗಡೆ ಅದೆಷ್ಟು ಸ್ವೀಟ್ ಆಗಿ ಇದೆಯೇ ಸೀತಾ ಅಂತ ಕೂಗಿದಾ ಕಣೆ! ತಕ್ಷಣ ಅವಳು ಆ ಪಡವಲನ ಕೆನ್ನೇಗೆ

| | | |
|---|---|---|
| | | ಹೊಡೆದಿದ್ದು ನೀನು ನೋಡಬೇಕಿತ್ತು. ಅವನ ಕೆನ್ನೇನೂ ಎರಡು ದಿನಗಳು ಟೊಮ್ಯಾಟೋ ತರಾನೇ ಊದಿಕೊಂಡಿತ್ತು! |
| ಸೀಮೇಬದನೇಕಾಯಿ | : | ಇನ್ನೊಂದು ವಿಷಯ ಕಣೇ, ಈಗೀಗಂತೂ, ಆ ತೆಂಗಿನಕಾಯೀಗೆ ಅದೇನು ಜಂಬ ಬಂದಿದೆ ಅಂತೀ... ಅವನ ಜುಟ್ಟನ್ನೂ ಮೇಲೆ ಮಾಡ್ಕೊಂಡು ನನ್ನನ್ನ ನೋಡಿದ್ರೂ ನೋಡದ ಹಾಗೆ ಇರ್ತಾನೆ. |
| ಬದನೇಕಾಯಿ | : | ಮದುವೆ ಸೀಸನ್ ಬಂದರೆ ಸಾಕು, ಅವನ ಸ್ವಾಭಿಮಾನ ಹಾಗೇ ಹೆಚ್ಚಾಗುತ್ತೆ. ಈಗ, ಅವನ ಬೆಲೆ ಒಂದಕ್ಕೆ ಇಪ್ಪತ್ತು ರೂಪಾಯಿಗಳಾದರೂ ಮದುವೆ ಮನೆಗಳಿಗೆ, ಅರಿಶಿನ ಕುಂಕುಮಗಳಿಗೆ, ಉಡುಗೊರೆಗಳಿಗೆ ಅವನು ಇರಲೇ ಬೇಕಲ್ಲಾ! ಜಂಬ ಬರದೆ ಇನ್ನೇನು ಆಗುತ್ತೆ? |
| ಸೀಮೇಬದನೇಕಾಯಿ | : | ಲೇ, ನಿನಗೆ ಕಾಶ್ಮೀರಿ ಸೇಬಿನ ವಿಷಯ ತಿಳೀತಾ? ಇವತ್ತು ಬೆಳಿಗ್ಗೆ ನಮ್ಮ ಬೆಳ್ಳುಳ್ಳಿ, ಸುವರ್ಣಗೆಡ್ಡೆ, ಬೆಂಡೇಕಾಯಿ ಎಲ್ಲಾ ಸೇರ್ಕೊಂಡು ಇವರೆಲ್ಲಾ ಆ ಸೇಬನ್ನ ಹಿಡಿದುಕೊಂಡು ಹಿಗ್ಗಾ ಮುಗ್ಗಾ ಹೊಡೆದಿದಾರಂತೆ – |
| ಬದನೇಕಾಯಿ | : | ಯಾಕೆ? |
| ಸೀಮೇಬದನೇಕಾಯಿ | : | ಇಷ್ಟು ವರುಷಗಳಾದರೂ, ಇವನು ಕಾಶ್ಮೀರಿ, ಬೆಂಗಳೂರಿನಲ್ಲಿದ್ದುಕೊಂಡು ಕನ್ನಡ ಕಲಿತಿಲ್ಲಾ ಅಂತ. |
| ಬದನೇಕಾಯಿ | : | ಬೈ ದಿ ವೇ, ಆ ವಯ್ಯಾರಿ ಸಂಸಾರಾನೇ ಕಾಣ್ತಿಲ್ಲಾ, ಅದೇ ಆ ಬಿಂಕದ ಸಿಂಗಾರಿಯರು...? |
| ಸೀಮೇಬದನೇಕಾಯಿ | : | ಓ! ಅವರಾ...? ಇಲ್ಲದೇ ಏನೂ? ಇವತ್ತು ಬೆಳಿಗ್ಗೆ ದಂಟೀ, ಸಬ್ಬಸ್ಸಿಗೆ, ಮೆಂತ್ಯ, ಪಾಲಕ್ ಎಲ್ಲಾ ಅಕ್ಕ ತಂಗಿಯರೂ ಮುಖಗಳಿಗೆ ಬಣ್ಣ ಬಳಿದುಕೊಂಡು ಬಂದು ಮಹಾರಾಣಿಯರ ತರಹ ಬುಟ್ಟಿಯಲ್ಲಿ ಕೂತಿದ್ರು. |
| ಬದನೇಕಾಯಿ | : | ಹೌದೇ? ಈಗೆಲ್ಲಿ, ಕಾಣಿಸ್ತಾ ಇಲ್ಲಾ? |
| ಸೀಮೇಬದನೇಕಾಯಿ | : | ಅಯ್ಯೋ, ಅವರು ಬಂದು ಕೂತು ಹತ್ತು ನಿಮಿಷಾನೂ ಆಗಿರಲಿಲ್ಲಮ್ಮ, ನಮ್ಮ ಮಳಿಗೆ ಪಕ್ಕದಲ್ಲಿರೋ ಗೂಳಿ ಬಂದು ಅವರನ್ನೆಲ್ಲಾ ತಿಂದ್ಕೊಂಡು ಹೋಯ್ತು! ಲೇ ಬದನೀ, ನೀನೇನೇ ಮೊದಲಿದ್ದ ಹಾಗೇ ಇದೀ? ಅದೇ ನಿನ್ನ ಚಿಕ್ಕಪ್ಪ ಈರಣ್ಣಗೆರೆ (ಮೈಸೂರು) ಬದನೇಕಾಯಿ ಬಣ್ಣ ಎಷ್ಟು ಚೆನ್ನಾಗಿ ಇದೆ? ನಾನೂ ನಿನ್ನ ಸಂಬಂಧೀನೇ, ನನ್ನ ಬಣ್ಣಾನೂ ಲೈಟ್ ಗ್ರೀನೂ... |

| | | |
|---|---|---|
| ಬದನೇಕಾಯಿ | : | ನನ್ನ ಬಣ್ಣದ ವಿಷಯ ಮಾತಾಡಬೇಡಾ ಕಣೆ. ನಾನೂ ಫೇಶಿಯಲ್ಲು, ಬ್ಯೂಟಿ ಪಾರ್ಲರ್ರು ಅಂತ ಸಾಕಷ್ಟು ಓಡಾಡಿದೆ. ನನ್ನ ಹುಟ್ಟು ಬಣ್ಣ ಇದು. ನಾನೇನು ಮಾಡಲಿ? |
| ಸೀಮೆಬದನೇಕಾಯಿ | : | ಅದೇನೋ ನಿಜ ಬಿಡು. ನಿನ್ನನ್ನ ಹುಳಿ ಮಾಡಿದಾಗಲೋ, ಪಲ್ಯ ಮಾಡಿದಾಗಲೋ ನಿನ್ನ ರುಚಿ ತಾನೇ ಮುಖ್ಯ? ನಿನ್ನ ಬಣ್ಣ ಯಾರಿಗೆ ಬೇಕು ಹೇಳು? ಅಂದ ಹಾಗೇ ಸಾಕೇ ನಮ್ಮ ಮಾತು. ಯಾರೋ ಇವತ್ತು ಎಷ್ರ್ರೀ ಇದರ ಬೆಲೆ ಅಂತ ನನ್ನ ಮೇಲೆ ಕೈ ಹಾಕ್ತಾ ಇದಾರೆ... ಬೈ! |
| ಬದನೇಕಾಯಿ | : | ಬೈ!! |

✷

## ಉಪಾಯ

ಸೀತಮ್ಮ ಬೇಜಾರಿನಿಂದ ಕೂತಿದ್ದರು. ರಾಧಮ್ಮ ಬಂದು ಯಾಕ್ರೀ ಅಂತ ಕೇಳಿದರೆ ನೋಡ್ರಿ ದರಿದ್ರ ಸೋಪುಗಳು ಬಟ್ಟೆ ಕೊಳೇನೇ ಹೋಗೋದಿಲ್ಲ ಅಂದರು. ಯಾವ ಸೋಪು ನೀವು ಉಪಯೋಗಿಸೋದು ಅಂತ ಕೇಳಿದರೆ ಯಾವುದೋ ಒಂದು ಬ್ರಾಂಡು ಹೇಳಿದರು. ರಾಧಮ್ಮ ಹೌದಾ ನಾನು ಆ ಸೋಪನ್ನೆ ಉಪಯೋಗಿಸೋದು ಅಂದ್ರು. ಅದಕ್ಕೆ ಸೀತಮ್ಮ ನೋಡ್ರಿ ಬಕೇಟಿನಲ್ಲಿ ಬಟ್ಟೆ ನೆನೆಸಿದೀನಿ ಸೋಪೂ ಅಲ್ಲೇ ಇದೆ ಅಂದರು. ರಾಧಮ್ಮ ಕೊಳೆ ಹೋಗುತ್ತೆ ಅಂತ ಸೋಪು ತಗೊಂಡು ಬಟ್ಟೆಗಳಿಗೆ ತಿಕ್ಕಿ ಒಗೆದು ಒಣಹಾಕಿ ನೋಡ್ರೀ ಕೊಳೆ ಎಷ್ಟು ಚೆನ್ನಾಗಿ ಹೋಗಿದೆ ಅಂದ್ರು. ಹತ್ತು ಬಟ್ಟೆಗಳನ್ನು ಒಗೆಯೋ ಶ್ರಮ ಸೀತಮ್ಮನಿಗೆ ಕಡಿಮೆಯಾಗಿತ್ತು. ತಮ್ಮ ಬುದ್ಧಿವಂತಿಕೆಗೆ ತಾವೇ ಮೆಚ್ಚಿಕೊಂಡರು. ನಂತರ ಹೌದ್ರೀ ನೀವು ಒಗೆದ್ರೆ ಕೊಳೆ ಎಷ್ಟು ಚೆನ್ನಾಗಿ ಹೋಗಿದೆ, ನಾಳೆನೂ ಇದೇ ಟೈಮಿಗೆ ಬನ್ರೀ ಅಂದಾಗ ರಾಧಮ್ಮ ತಲೆ ತಿರುಗಿ ಬೀಳೋದೊಂದು ಬಾಕಿ ಇತ್ತು.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳ**

- ಬೆಂಗಳೂರಿಗರ ಭಜನೆ: ಮೆಟ್ರೊ, ಬೇಗ ಕಟ್ರೊ....
- ರಸ್ತೆ ಬದಿ ಶ್ರದ್ಧಾಂಜಲಿ ಜಾಹೀರಾತುಗಳನ್ನು ನೋಡಿದರೆ ಈಗ ಸತ್ತವರೆಲ್ಲ ಫ್ಲೆಕ್ಸ್ ಸೇರುತ್ತಿರುವಂತಿದೆ.
- ನಿಮ್ಮ ಪೋಷಕರನ್ನು ಗೌರವಿಸಿ ಏಕೆಂದರೆ ಅವರು ಗೂಗಲ್ ಸಹಾಯ ಇಲ್ಲದೆಯೆ ಪಾಸಾಗಿದ್ದಾರೆ.
- ಯಾವುದೇ ಯಶಸ್ಸನ್ನು ವಿವರಿಸಲಾಗದು, ವರ್ಣಿಸಲಾಗದು, ಅನುಭವಿಸಬಹುದು ಅಷ್ಟೆ
- ರಾಜಕಾರಣದಲ್ಲಿ ನಾಳಿನ ಶತ್ರು ಇಂದಿನ ಮಿತ್ರ.
- ಯು ಡು ನಾಟ್ ನೊ ವಾಟ್ ದೆ ಆರ್ ಡುಯಿಂಗ್ ಇನ್ ಫ್ರಂಟ್ ಆಫ್ ಯುವರ್ ಬ್ಯಾಕ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನೀವು ಪ್ರತಿ ದಿನ 20 ನಿಮಿಷವಾದರೂ ಧ್ಯಾನ ಮಾಡಬೇಕು; ನೀವು ತುಂಬಾ ಬ್ಯುಸಿ ಮನುಷ್ಯರಾದರೆ ಒಂದು ತಾಸು ಧ್ಯಾನ ಮಾಡಬೇಕು.
- ಕುಡಿದ ಮೇಲೆ ಸುಳ್ಳು ಹೇಳುವ ಸಂಭವ ಕಡಿಮೆ.
- ಯು ಆರ್ ನಾಟ್ ಎ ಡ್ರಾಪ್ ಇನ್ ದಿ ಓಷನ್. ಯು ಆರ್ ದಿ ಎಂಟೈರ್ ಓಷನ್ ಇನ್ ಅ ಡ್ರಾಪ್.
- ಬರೇ ಪ್ರಿಸ್ಕ್ರಿಪ್ಷನ್‌ನಿಂದ ಕಾಯಿಲೆ ವಾಸಿಯಾಗದು; ಔಷಧಿ ಸೇವಿಸಬೇಕು.
- ಜನಜಂಗುಳಿ ಮಧ್ಯೆಯೂ ನೀವು ಏಕಾಂಗಿಯಾಗಿದ್ದರೆ ಅದಕ್ಕಿಂತ ದುರಾದೃಷ್ಟ ಬೇರೊಂದಿಲ್ಲ.
- ಯಾತ್ರೆಗೆ ಹೋಗುವುದು ಅನುಭವದ ತೂಕ ತರಲು; ಲಗೇಜಲ್ಲ.
- ಸಿಂಪ್ಲಿಸಿಟಿ ಈಸ್ ದಿ ಅಲ್ಟಿಮೇಟ್ ಸೊಫಿಸ್ಟಿಕೇಷನ್.
- ವೇಶ್ಯೆಯರ ಸಹವಾಸ ಮಾಡುವಾಗ ಕಾಂಡೋಮ್ ಬಳಸುವುದು ಸ್ಕೂಟರ್ ಬಿಡುವಾಗ ಹೆಲ್ಮೆಟ್ ಧರಿಸಿದಂತೆ. ಸುರಕ್ಷಾ ಸಾಧನ.
- ತೀರಾ ಹತಾಶನಾದಾಗ ನಾನು ಶವರ್ ಕೆಳಗೆ ಹೋಗಿ ನಿಲ್ಲುತ್ತೇನೆ. ನನ್ನೆಲ್ಲ ಚಿಂತೆಗಳು ನೀರಿನೊಂದಿಗೆ ಹರಿದು ಹೋಗಲಿ ಎಂದು.
- ನಾನು ನಾಸ್ತಿಕನಾಗಲು ಹೊರಟೆ ಆದರೆ ರಜಾ ದಿನಗಳು ಕಡಿಮೆ ಎಂದು ಗೊತ್ತಾದ ಮೇಲೆ ಆದರ ಯೋಚನೆ ಬಿಟ್ಟೆ.

✷

# ಸನ್ಮಾನ ದುಮ್ಮಾನ

## ಕಿರು ಪ್ರಹಸನ

**- ಬೇಲೂರು ರಾಮಮೂರ್ತಿ**

### ನಿರೂಪಕ

ನಮಸ್ಕಾರ ವೀಕ್ಷಕರೇ, ಈಗ ನಮ್ಮ ಕನ್ನಡ ನಾಡಿನ ಉದ್ದಾಮ ಸಾಹಿತಿಯೊಬ್ಬರಿಗೆ ಸನ್ಮಾನ ನಡೆಯಲಿದೆ. ಅದಕ್ಕೆ ಮುಂಚೆ ಅವರ ಪರಿಚಯವನ್ನು ನಾನು ನಿಮಗೆ ಮಾಡಿಕೊಡಬೇಕು. ಅಂದ ಹಾಗೆ ಸಾಹಿತಿಗಳು ಸ್ಟೇಜ್‌ಗೆ ಬಂದ ಮೇಲೆ ಪರಿಚಯ ಮಾಡ್ಲೋ, ಪರಿಚಯ ಮಾಡಿದ ಮೇಲೆ ಸ್ಟೇಜ್‌ಗೆ ಕರೀಲೋ. ಇಲ್ಲ ಇಲ್ಲ ಅವರನ್ನು ನಿಮ್ಮ ಮುಂದೆ ನಿಲ್ಲಿಸಿದ ಮೇಲೇ ಪರಿಚಯ ಮಾಡ್ತೀನಿ.

ವೇದಿಕೆಗೆ ಶ್ರೀ ಶ್ರೀ ಶ್ರೀಗಳು ದಯಮಾಡಿಸಬೇಕು.

ರಂಗದ ಒಂದು ತುದಿಯಿಂದ ಹಿರಿಯರೊಬ್ಬರು ಆಗಮಿಸಿ ಸಭೆಗೆ ಕೈ ಮುಗಿದು ನಿಲ್ಲುತ್ತಾರೆ.

ಇವರನ್ನು ನಾನು ಯಾಕೆ ಶ್ರೀ ಶ್ರೀ ಶ್ರೀಗಳು ಅಂತ ಕೂಗಿದೆ ಅಂತ ನಿಮಗೆಲ್ಲ ಅಚ್ಚರಿಯಾಗಿರಬೇಕು. ಇವರು ಯಾವುದೇ ಮಠದ ಸ್ವಾಮಿಗಳಲ್ಲ. ಇವರು ಶ್ರೀರಂಗಪಟ್ಟಣದ ಶ್ರೀರಂಗರಾಯರ ಮಗ ಶ್ರೀನಿವಾಸ. ಇವರ ಮನೆತನದ ಲಾಂಛನ ಮೂರು ನಾಮ. (ಹಣೆ ಮೇಲೆ ಬೆರಳು ತೋರಿಸಬೇಕು) ಅದಕ್ಕೇ ಇವರ ಕಾವ್ಯ ನಾಮ ಶ್ರೀಶ್ರೀಶ್ರೀ.

ಶ್ರೀನಿವಾಸ ಪೆದ್ದು ಪೆದ್ದಾಗಿ ನಗುತ್ತಾ ಸಭೆಗೆ ಇನ್ನೊಮ್ಮೆ ಕೈ ಮುಗಿಯುತ್ತಾನೆ.

### ನಿರೂಪಕ

ಈಗ ಇವರ ಪರಿಚಯ ಮಾಡಿಕೊಡಲು ನನಗೆ ಹೆಮ್ಮೆಯಾಗುತ್ತದೆ. ನಾನು ಒಂದೊಂದು ಮಾತಾಡಿದ ಹಾಗೆ ನೀವು ಚಪ್ಪಾಳೆ ಹೊಡೆಯಬೇಕು. ನಿಮ್ಮ ಒಂದು ಚಪ್ಪಾಳೆಗೆ ತ್ರೀ ಇನ್ ಒನ್ ಎಫೆಕ್ಟ್ ಇದೆ. ಏನು ಗೊತ್ತಾ, ಚಪ್ಪಾಳೆ ಹೊಡೆದರೆ ನಿಮ್ಮ ಆರೋಗ್ಯ ಸುಧಾರಣೆಯಾಗುತ್ತದೆ. ಅದಕ್ಕೆ ಎಲ್ಲಾ ಪಾರ್ಕುಗಳಲ್ಲೂ ಜನ ಚಪ್ಪಾಳೆ ಹೊಡ್ಕೊಂಡು ನಗ್ತಾ ಇರ್ತಾರೆ. ಇನ್ನೊಂದು ನಮ್ಮ ಸಾಹಿತಿಗಳಿಗೆ ನಿಮ್ಮ ಚಪ್ಪಾಳೆಯಿಂದ ಖುಷಿಯಾಗುತ್ತದೆ. ಮೂರನೆಯದು ಸಭಾಂಗಣದಲ್ಲಿ ತುಂಬಾ ಸೊಳ್ಳೆಗಳಿವೆ. ಹೀಗೆ ನಿಮ್ಮ ಚಪ್ಪಾಳೆಯಿಂದ ನಿಮ್ಮ ಶಕ್ತ್ಯಾನುಸಾರ ಸೊಳ್ಳೆಗಳನ್ನು ಸಾಯಿಸಿ ಅವುಗಳಿಗೆ ಮುಕ್ತಿ ಕರುಣಿಸಿ. ಇಂದು ಇಲ್ಲಿ ಸಾಹಿತಿಯೊಬ್ಬರಿಗೆ ಸನ್ಮಾನ ಆಗುವಾಗ ಚಪ್ಪಾಳೆ ಹೊಡೆತದಿಂದ ಸಾಯುವ ಸೊಳ್ಳೆಗಳು ಮುಂದಿನ ಜನ್ಮದಲ್ಲಿ ಸಾಹಿತಿಯಾಗಿಯೇ ಹುಟ್ಟುತ್ತವೆ ಎನ್ನುವ ನಂಬಿಕೆ ಇದೆ.

ಶ್ರೀನಿವಾಸ ತಾನೂ ಚಪ್ಪಾಳೆ ಹೊಡೆಯುತ್ತಾ ಪ್ರೇಕ್ಷಕರಿಗೂ ಚಪ್ಪಾಳೆ ಹೊಡೆಯಿರಿ ಅಂತ ಸಭೆಗೆ ಸೂಚಿಸುತ್ತಾನೆ.

**ನಿರೂಪಕ**

ನಾನು ಆಗಲೇ ಹೇಳಿದೆ ಇವರು ಸಾಹಿತಿಗಳು ಅಂತ. ಇವರು ಕನ್ನಡ ನಾಡಿನ ಅತ್ಯಂತ ಜನಪ್ರಿಯ ಸಾಹಿತಿಗಳು. ಇವರಿಂದ ಕನ್ನಡ ನಾಡಿಗೆ, ಜನತೆಗೆ ಮಹದುಪಕಾರವಾಗಿದೆ. ಇವರು ಬರೆಯೋಕ್ಕೆ ಪ್ರಾರಂಭ ಮಾಡಿದ್ದು ಇವರ ತಾಯಿಯ ಹೊಟ್ಟೆಯಲ್ಲಿದ್ದಾಗಲೇ. ಅಂದ್ರೆ ಅಲ್ಲಿಗೆ ಪೆನ್ನು ಪೇಪರು ಸಪ್ಲೈ ಮಾಡ್ತಿದ್ದದ್ದು ಹೇಗೆ ಅಂತೀರಾ. ಅದು ಗುಟ್ಟು.

ಆದಾಗ್ಯೂ ಶ್ರೀಶ್ರೀಶ್ರೀಗಳಿಗೆ (ನಿಧಾನವಾಗಿ) ಇದುವರೆವಿಗೂ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ (ಚಪ್ಪಾಳೆ) / ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಚಪ್ಪಾಳೆ) / ಕನ್ನಡ ರಾಜ್ಯೋತ್ಸವ ಪ್ರಶಸ್ತಿ (ಚಪ್ಪಾಳೆ) / ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಚಪ್ಪಾಳೆ) / ಮತ್ತು ಅನೇಕ ಸಂಘ ಸಂಸ್ಥೆಗಳ ಪ್ರಶಸ್ತಿ (ಚಪ್ಪಾಳೆ) / ನಾಡೋಜ ಪ್ರಶಸ್ತಿ (ಚಪ್ಪಾಳೆ) / ಪಂಪ ಪ್ರಶಸ್ತಿ (ಚಪ್ಪಾಳೆ)

(ಗಟ್ಟಿಯಾಗಿ) ಇವ್ಯಾವುದೂ ಬಂದಿಲ್ಲ.

ಶ್ರೀನಿವಾಸ ಬೇಜಾರಿನಿಂದ ಕುಸಿಯುತ್ತಾನೆ.

(ನಿಧಾನವಾಗಿ) ಇವರು ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಕಾದಂಬರಿಗಳನ್ನು

(ಗಟ್ಟಿಯಾಗಿ) ಬರೆದಿಲ್ಲ.

ಪಾಪ ಇವರು ಕಥೆ ಕಾದಂಬರಿ ಬರೆಯೋಕೆ ಶುರು ಮಾಡಿದರು. ಆದರೆ ಯಾವ ಪ್ರಕಾಶಕರೂ ಇವರ ಕಾದಂಬರಿಗಳನ್ನು ಪ್ರಕಟಿಸಲಿಲ್ಲ. ಯಾವ ಪತ್ರಿಕೆಯೂ ಇವರ ಕಥೆಯನ್ನಾಗಲೀ, ಕಾದಂಬರಿಗಳನ್ನಾಗಲೀ ಮೂಸಲಿಲ್ಲ. ಹಾಗೇನಾದರೂ ಮಾಡಿದ್ದರೆ ಇವತ್ತಿಗೆ ಅಂದಾಜು ನಾಲ್ಕು ನೂರಕ್ಕೂ ಹೆಚ್ಚು ಕಾದಂಬರಿಗಳಾಗುತ್ತಿದ್ದವು. (ಚಪ್ಪಾಳೆ)

ಶ್ರೀನಿವಾಸ ಪೆದ್ದು ಪೆದ್ದಾಗಿ ನಗ್ತಾನೆ.

(ನಿಧಾನವಾಗಿ) ಇರ್ಲಿ ಬಿಡಿ ಪರವಾಗಿಲ್ಲ. ಕಾದಂಬರಿಗಳು ಪ್ರಕಟ ಆಗದಿದ್ರೆ ಏನಂತೆ. ಇವರ ಸುಮಾರು ನೂರು ನಾಟಕಗಳು –

(ಗಟ್ಟಿಯಾಗಿ) ರಂಗಪ್ರವೇಶ ಆಗಲೇ ಇಲ್ಲ.

ಯಾಕಂದ್ರೆ ಯಾವ ರಂಗ ತಂಡಗಳೂ ಇವರ ನಾಟಕಗಳನ್ನು ಮೂಸಲಿಲ್ಲ. ಒಂದು ನಾಟಕ ಬರೀತೀನಿ ಅದನ್ನು ಸ್ಟೇಜ್ ಮಾಡ್ತೀರಾ ಅಂತ ಎಲ್ಲ ತಂಡಗಳನ್ನೂ ಕೇಳಿಕೊಂಡೇ ಬಂದರು. ಯಾರೂ ಸರಿಯಾಗಿ ಉತ್ತರಿಸಲಿಲ್ಲ. ಹೀಗಾಗಿ ಒಂದು ನಾಟಕವನ್ನೂ ಬರೆಯಲಿಲ್ಲ. ಅವತ್ತೇನಾದರೂ ಯಾವುದಾದರೂ ತಂಡ ನಾವು ನಿಮ್ಮ ನಾಟಕವನ್ನು ಸ್ಟೇಜ್ ಮಾಡ್ತೀವಿ ನೀವು ಬರೀರಿ ಅಂತ ಹೇಳಿದ್ದರೆ ಇವತ್ತಿಗೆ ನೂರಾರು ನಾಟಕಗಳನ್ನು ಬರೆದು ಬಿಸಾಕಿಬಿಡ್ತಾ ಇದ್ರು. (ಚಪ್ಪಾಳೆ)

ಶ್ರೀನಿವಾಸ ಹೌದು ಹೌದು ಅಂತ ಪೆದ್ದು ಪೆದ್ದಾಗಿ ಚಪ್ಪಾಳೆ ತಟ್ಟುತ್ತಾನೆ.

ಆದರೂ (ನಿಧಾನವಾಗಿ) ಶ್ರೀ ಶ್ರೀ ಶ್ರೀಗಳ ಕಿರುತೆರೆಯ ಸಂಬಂಧ ತುಂಬಾ ಹಳೆಯದು. ಇವರು ಚಿಕ್ಕ ವಯಸ್ಸಿನಿಂದಲೇ ಕಿರುತೆರೆಯೊಂದಿಗೆ ತೊಡಗಿಸಿಕೊಂಡಿದ್ದಾರೆ. ಇದುವರೆವಿಗೂ ಪ್ರಸಾರವಾದ ಎಲ್ಲಾ ಧಾರಾವಾಹಿಗಳನ್ನೂ ನೋಡಿದ್ದಾರೆ. ಆದರೂ ಇವರ ಹತ್ತಾರು ಕಥೆಗಳು

(ಗಟ್ಟಿಯಾಗಿ) ಕಿರುತೆರೆಯಲ್ಲೂ ಧಾರಾವಾಹಿಗಳಾಗಿಲ್ಲ.

ಇವರು ಒಂದು ಕಿರುತೆರೆ ಧಾರಾವಾಹಿಗೆ ಕಥೆ ಬರೆದು ನಿರ್ಮಾಪಕರ ಹತ್ತಿರ ತೆಗೆದುಕೊಂಡು ಹೋದರು. ಆದರೆ ಆ ಕಥೆ ಹತ್ತಾರು ಧಾರಾವಾಹಿಗಳಿಂದ ಕದ್ದು ಬರೆದಿದ್ದು ಅಂತ ಗೊತ್ತಾದ್ದರಿಂದ ಅವರು ಅದನ್ನು ತಿಪ್ಪೆಗೆ ಎಸೆದರು. ಒಂದು ವೇಳೆ ಅದು ಕದ್ದು ಬರೆದ ಕಥೆ ಅಂತ ನಿರ್ಮಾಪಕರಿಗೆ ಗೊತ್ತಾಗದೇ ಇದ್ದಿದ್ದರೆ, ಇನ್ನೂ ಅನೇಕ ನಿರ್ಮಾಪಕರು ಶ್ರೀ ಶ್ರೀ ಶ್ರೀಗಳ ಹತ್ತಿರ ಬಂದು ಕಥೆ ಬರೆಸಿಕೊಂಡು ಹೋಗ್ತಿದ್ದರು. ಪಾಪ ಅದಕ್ಕೆ ಛಾನ್ಸೇ ಇಲ್ಲ.

ಪಾಪ ಇವರು ಹೇಗಾದರೂ ಆಗಲಿ ನನಗೊಂದು ಪ್ರಶಸ್ತಿ ಬರಲಿ, ಅದರ ಮೂಲಕ ನನಗೊಂದು ಸೈಟ್ ಸಿಗಲಿ ಅಂತ ಇನ್ನಿಲ್ಲದ ಪ್ರಯತ್ನ ಮಾಡಿದರು. ಆದರೆ ಅವೆಲ್ಲ ವ್ಯರ್ಥವಾಯಿತು.

(ನಿಧಾನವಾಗಿ) ಆದರೂ ಇವರು ಸಾಹಿತ್ಯ ಸೇವೆ ಮಾಡಬೇಕೆಂಬ ಒಂದೇ ಹಂಬಲದಿಂದ, ಅಮೆರಿಕಾದಲ್ಲಿ ನಡೆಯುವ ಅಕ್ಕ ಸಮ್ಮೇಳನ / ಇಂಗ್ಲೆಂಡಿನಲ್ಲಿ ನಡೆಯುವ ಕನ್ನಡ ಸಮ್ಮೇಳನ / ಆಸ್ಟ್ರೇಲಿಯಾ / ಸಿಂಗಪುರ / ದುಬೈ ಮುಂತಾದ ಕಡೆಯಲ್ಲಿ ನಡೆದ ಅನೇಕ ಕನ್ನಡ ಕಾರ್ಯಕ್ರಮಗಳಿಗೆ

(ಗಟ್ಟಿಯಾಗಿ) – ಹೋಗೇ ಇಲ್ಲ.

ಏಕೆಂದರೆ ಅಂಥಾ ಇವರ ಯಾವ ಪ್ರಯತ್ನವೂ ಕೈಗೂಡಿಲ್ಲ. ಎಷ್ಟೊಂದು ಲಾಬಿ ಮಾಡಿದರೂ ಇವರನ್ನು ಯಾರೂ ವಿಮಾನ ಹತ್ತಿಸಲಿಲ್ಲ.

ಆದರೂ ಇವರನ್ನು ನಾವು ಇವತ್ತು ಇಲ್ಲಿ ಸನ್ಮಾನ ಮಾಡ್ತಿದೀವಿ ಯಾಕೆ ಗೊತ್ತೇ

(ಗಟ್ಟಿಯಾಗಿ) ಇವರು ಕನ್ನಡಿಗರನ್ನು – ಇವರ ಕಥೆ ಕಾದಂಬರಿ ಓದುವ ತೊಂದರೆಯಿಂದ

ಇವರ ನಾಟಕಗಳನ್ನು ನೋಡುವ ದೌರ್ಭಾಗ್ಯದಿಂದ

ಇವರ ಕಿರುತೆರೆ ಧಾರಾವಾಹಿಗಳನ್ನು ನೋಡುವ ಸಂಕಟದಿಂದ

ಇವರ ಕಥೆಯ ಸಿನಿಮಾ ನೋಡುವ ತಾಪತ್ರಯದಿಂದ

ಮುಕ್ತಗೊಳಿಸಿ, ಕನ್ನಡಿಗರು ನೆಮ್ಮದಿಯಿಂದ ಬದುಕಲು ಇಷ್ಟು ವರ್ಷ ಆಸ್ಪದ ಮಾಡಿಕೊಟ್ಟಿದ್ದಾರಲ್ಲ ಅದಕ್ಕಾಗಿ ಏಳು ಕೋಟಿ ಕನ್ನಡಿಗರೂ ಇವರಿಗೆ ಆಭಾರಿಯಾಗಿದ್ದಾರೆ.

ಇವರು ಇಷ್ಟು ವರ್ಷ ಹೇಗಿದ್ದರೋ ಇನ್ನು ಅವರು ಬದುಕಿರುವ ತನಕವೂ ಹಾಗೇ ಇದ್ದರೆ ಅದು ಇವರು ಕನ್ನಡಿಗರಿಗೆ ಮಾಡುವ ದೊಡ್ಡ ಉಪಕಾರ ಅಂತ ಭಾವಿಸಿ ಶ್ರೀಶ್ರೀಶ್ರೀಗಳಿಗೆ ಸನ್ಮಾನ ಮಾಡುತ್ತಿದ್ದೇವೆ.

ಇದೋ ನಾವು ಹೊದಿಸುವ ಶಾಲು – ಬರಿಗೈಯಿಂದ ಅಭಿನಯ

ಇದೋ ನಾವು ಹಾಕುವ ಹಾರ

ಇದೋ ನಾವು ಕೊಡುವ ಸನ್ಮಾನ ಪತ್ರ

ಇದೋ ನಾವು ಕೊಡುವ ಹಣ್ಣಿನ ಬುಟ್ಟಿ

ಶ್ರೀನವಾಸ ಪೆದ್ದು ಪೆದ್ದಾಗಿ ನಿರೂಪಕನ ಕಡೆಯೂ ಪ್ರೇಕ್ಷಕರ ಕಡೆಯೂ ನೋಡುತ್ತಾ ಎಲ್ಲಿ ಹಾರ, ಎಲ್ಲಿ ಶಾಲು, ಎಲ್ಲಿ ಸನ್ಮಾನ ಪತ್ರ ಅಂತ ಆ ಕಡೆ ಈ ಕಡೆ ನೋಡಿಕೊಂಡು ಪರದಾಡುತ್ತಾನೆ. ತಲೆ ಚಚ್ಚಿಕೊಳ್ಳುತ್ತಾನೆ.

ನಿರೂಪಕ ಶ್ರೀನಿವಾಸನನ್ನು ಭುಜ ಬಳಸಿ ಕರೆದುಕೊಂಡು ಹೋಗುತ್ತಾ ಶ್ರೀಶ್ರೀಶ್ರೀಗಳಿಗೆ ಜೈ ಅಂದು ಕೂಗುತ್ತಾ ಹೋಗುತ್ತಾನೆ.

✷

# ಚಿಂತೆ

ಲೆಕ್ಕ ಇಲ್ಲ ರಾಜಕಾರಿಣಿಯ ಬಳಿ ಇರುವ ದುಡ್ಡಿಗೆ
ಆದರೆ ಯಾರಿಗೂ ಕೊಡುವುದಿಲ್ಲ ಬಡ್ಡಿಗೆ
ಅವನ ಬಳಿ ಇರುವ ಹಣದ ಕೊಪ್ಪರಿಗೆ
ಸಾಕೇ ಸಾಕು ಏಳೇಳು ತಲೆಮಾರಿಗೆ
ಈಗ ಒಂದೇ ಚಿಂತೆ ಅವನ ತಲೆಗೆ
ಏನು ಮಾಡುತ್ತವೆ ಹೇಗೆ ಸಾಗಿಸುತ್ತವೆ ಬಾಳು
ನನ್ನ ಎಂಟನೇ ವಂಶದ ಕುಡಿಗಳು

ಹುರುಳಿ ಕಟ್ಟು

# ಊದೋ ಶಂಖ.......

**- ಎಚ್. ಗೋಪಾಲಕೃಷ್ಣ**

**ಕ**ಳೆದ ತಿಂಗಳು ಒಂದು ಊರು ನೋಡಲು ಹತ್ತಿರದ ಸ್ನೇಹಿತರು, ನಂಟರು ಸೇರಿ ಯೋಜನೆ ಹಾಕಿಕೊಂಡು ಹೋಗಿದ್ದೆವು. ಊರು ನೋಡಲು ಅಲ್ಲಿನ ರೈಲು ಇಳಿದ ನಂತರ ನಮ್ಮನ್ನು ಸುತ್ತಾಡಿಸಲು ಊರು ತೋರಿಸಲು ಅಲ್ಲಿಯದ್ದೇ ಆದ ಒಂದು ವಾಹನ ಏರ್ಪಾಡು ಮಾಡಿಕೊಂಡಿದ್ದೆವು. ನಾವು ಊರಿನ ಬಗ್ಗೆ ಕೇಳಿದ್ದ, ಗೆಳೆಯರು ತಿಳಿಸಿದ್ದ ಮಾಹಿತಿಗಳು ನಮ್ಮ ಬಳಿ ಇದ್ದವು. ಅದರ ಜತೆಗೆ ನಮ್ಮಲ್ಲಿ ಇಂಟರ್ ನೆಟ್ ತಿಳಿದವರು ಅದರ ಮೂಲಕವೂ ಅದೆಷ್ಟೋ ಮಾಹಿತಿಗಳನ್ನು ಕಲೆಹಾಕಿ ಸುತ್ತ ಮುತ್ತ ನೋಡಲೇ ಬೇಕಾದ ಸ್ಥಳಗಳ ಪಟ್ಟಿ ಮಾಡಿ ಇಟ್ಟುಕೊಂಡಿದ್ದರು.

ವಾಹನ ಸರಿಯಾದ ಸಮಯಕ್ಕೆ ನಾವು ಇಳಿದುಕೊಂಡಿದ್ದ ಸ್ಥಳಕ್ಕೆ ಬರುವ ಸೂಚನೆಯನ್ನೂ ನೀಡಿದ್ದೆವು. ಆ ಸಮಯಕ್ಕೆ ಎಲ್ಲರೂ ತಯಾರಾಗಿ ಕಾದಿದ್ದೆವು. ವಾಹನ ಸಮಯಕ್ಕೆ ಬರಲೇ ಇಲ್ಲ. ಸುಮಾರು ಎರಡೂವರೆ ಗಂಟೆಗಳ ಕಾಲ ನಿಧಾನಿಸಿ ಚಾಲಕ ಬಂದ, ಡೀಸೆಲ್ ಕೊಳ್ಳಲು ಕಾಸು ಕೊಡಿ ಅದನ್ನ ಹಾಕಿಸಿಕೊಂಡು ವಾಹನ ತರ್ತೀನಿ ಅಂತ ಕಾಸು ತಗೊಂಡು ಹೋದವನು ಮತ್ತೂ ಅರ್ಧ ಗಂಟೆ ತಡಮಾಡಿಕೊಂಡು ಬಂದ.

ಕೊಳಕು ಬಟ್ಟೆ, ಜತೆಗೆ ಒಂದು ರೀತಿಯ ಕೋಪಿಷ್ಟ ಮುಖ ಮತ್ತು ಬಾಯಲ್ಲಿ ಜಗಿಯುತ್ತಿರುವ ತಂಬಾಕು - ಇದು ಚಾಲಕನ ವೇಷ! ಕಸ ತುಂಬಿರುವ ಗಾಡಿ, ಕೂಡುವ ಸೀಟುಗಳ ಮೇಲೆ ಚದುರಿದ ಹಾಗೆ ಬಿದ್ದಿರುವ ಆಹಾರದ ಅವಶೇಷಗಳು... ನೋಡಿದ ಕೂಡಲೇ ಅಸಹ್ಯ ಹುಟ್ಟಿಸುವ ಹಾಗಿರುವ ವ್ಯವಸ್ಥೆ !

ಏನು ಗಾಡಿ ಹೀಗಿದೆಯಲ್ಲಾ ? ಅಂತ ಸಿಡುಕಿದೆ.

ಒಂದೇ ನಿಮಿಷ ಇರಿ ಸಾರ್, ಸರಿ ಮಾಡಿಬಿಡ್ತೀನಿ.. ಅಂತ ಸೀಟುಗಳನ್ನ ಕೊಡವಿದ. ವಾಹನದ ಒಳಗೆ ಒಂದು ಸಲ ನುಗ್ಗಿ ಸ್ವಚ್ಛ ಮಾಡಿದ ಹಾಗೆ ಕೈಕಾಲು ಆಡಿಸಿದ. ಹೇಗೋ ಗಾಡಿ ಗೊತ್ತು ಮಾಡಿಕೊಂಡು ಆಗಿದೆ, ಈಗ ಬೇರೆ ಗಾಡಿ ಹುಡುಕಿಕೊಂಡು ಹೋಗಲು ಸಮಯ ಸಾಲದು, ಇದರಲ್ಲೇ ಹೇಗೋ ಮ್ಯಾನೇಜು ಮಾಡೋದು ಅಂತ ತೀರ್ಮಾನಿಸಿದೆವು.

ಗಾಡಿ ಹತ್ತಿ ಕೂತರೆ ಒಂದುರೀತಿಯಲ್ಲಿ ಒತ್ತುವ ಸೀಟುಗಳು ಮತ್ತು ಸಮ ಇಲ್ಲದೇ ಇರುವ ಆಸನ.

ಏನಪ್ಪಾ ಹೀಗಿದೆ ಗಾಡಿ?

ಸಾಬ್, ಒಂದು ವಾರ ಗೋವಾಗೆ ಹೋಗಿತ್ತು ಗಾಡಿ, ಬೆಳಿಗ್ಗೆ ಬಂತು ಅದನ್ನ ಹೀಗೇ ತಂದೆ. ಅದಕ್ಕೆ ಸ್ವಲ್ಪ ಸರಿಯಿಲ್ಲ.. ಒಂದು ಸ್ವಲ್ಪ ದೂರ ಹೋದಮೇಲೆ ಸರಿ ಹೋಗುತ್ತೆ.......

ಇನ್ನೇನು ಮಾತಾಡೋದು? ಕೂತೆವು.

ಗಾಡಿ ಸ್ಟಾರ್ಟ್ ಆಗುವುದಕ್ಕೇ ಹತ್ತು ನಿಮಿಷ ಹಿಡೀತು. ಗಾಡಿ ಹೊರಟ ನಂತರ ಚಾಲಕ ನಮ್ಮನ್ನ ಮಾತಿಗೆ ಎಳೆದ. ಎಲ್ಲೆಲ್ಲಿ ಹೋಗಬೇಕು ಅಂತ ಇದೀರಾ ಸಾಬ್?

ನಮ್ಮ ಪ್ಲಾನ್ ಹೇಳಿದೆವು.

ಮೊದಲನೇ ಜಾಗ ನಾವು ಹೋಗಬೇಕಿದ್ದದ್ದು ಒಂದು ಫಾಲ್ಸು. ಸುಮಾರು ಮೂವತ್ತು ಕಿಲೋಮೀಟರಿನಷ್ಟು ದೂರದ್ದು. ನಂತರ ಅಲ್ಲಿಂದ ಹದಿನೈದು ಕಿಲೋಮೀಟರಿನಷ್ಟು ದೂರದ ಒಂದು ದೇವಸ್ಥಾನ, ನಂತರ ಅಲ್ಲಿಂದ ಮತ್ತೊಂದು ಬಜಾರು.........

ಎಲ್ಲಾ ವಿವರ ಕೇಳಿಸಿಕೊಂಡ ಚಾಲಕ.

ಸಾಬ್ ಫಾಲ್ಸಿಗೆ ನೀವು ಹೋಗಬೇಕು ಅಂದರೆ ಹನ್ನೆರೆಡು ಮೈಲಿ ನಡೀಬೇಕು.......

ಯಾಕಪ್ಪಾ ಫಾಲ್ಸಿನ ಮುಂದೇನೇ ಗಾಡಿ ನಿಲ್ಲಿಸಬಹುದು ಅಂತ ಹೇಳಿದ್ದರು........

ಅದು ಮಳೆ ಬರೋಕ್ಕೆ ಮೊದಲು ಸಾಬ್, ಈಗ ಮಳೆ ಬಂದಿದೆ ಅಲ್ಲಾ ಅದಕ್ಕೇ ಅಲ್ಲೀಗಂಟ ಹೋಗಲ್ಲ......

ಸರಿ ನೀನು ಹೊರಡು ನೋಡೋಣ... ಅಂತ ಕೂತೆವು.

ಸರಿಯಾಗಿರೋ ರಸ್ತೆಯಲ್ಲೂ ಗಾಡಿ ಹತ್ತು ಕಿಲೋಮೀಟರು ವೇಗದಲ್ಲಿ ಹೋಗ್ತಾ ಇದೆ!

ಯಾಕೆ ಗಾಡಿ ಇಷ್ಟು ನಿಧಾನವಾಗಿ ಓಡಿಸ್ತಿದೀರೀ..?

ಸಾಬ್ ರಸ್ತೆ ಸರಿಯಿಲ್ಲ......

ನಿಮಗೆ ಮಾತ್ರಾ ರಸ್ತೆ ಸರಿಯಿಲ್ಲವಾ? ಮಿಕ್ಕ ಗಾಡಿಗಳು ನಿಮಗಿಂತಲೂ ವೇಗವಾಗಿ ಹೋಗ್ತಾ ಇದೆ. ಅದು ಹೇಗೆ?

ಚಾಲಕ ಒಂದು ಸೆಕೆಂಡು ಯೋಚಿಸಿದ ಹಾಗೆ ಮಾಡಿದ.

ನಂತರ ಗಾಡಿಯ ವೇಗ ಹೆಚ್ಚಿಸಿದ, ಹೇಗೆ ಹೆಚ್ಚಿಸಿದ ಅಂದರೆ ಒಳಗೆ ಕೂತಿರುವ ನಾವುಗಳು ಮಿಕ್ಸಿಯಲ್ಲಿ ತಿರುಗಿದ ಹಾಗೆ ಒಬ್ಬರಿಗೊಬ್ಬರು ಢಿಕ್ಕಿ ಹೊಡೆದುಕೊಂಡೆವು.......

ತರಲೆ ಚಾಲಕನ ಬಳಿ ಸಿಕ್ಕಿಕೊಂಡೆವು ಅಂತ ಅರ್ಥವಾಯಿತು.

ಹಲೋ ಗಾಡಿ ನಿಲ್ಲಿಸು ಅಂದೆ.

ಯಾಕೆ..?

ಯಾಕೆ ಅಂದರೆ ನಾವು ಜಾಗ ನೋಡೋಕ್ಕೆ ಬಂದಿರೋದು ನಿಮ್ಮೂರಲ್ಲಿ ಸಾಯೋಕ್ಕಲ್ಲ..

ನಾನೇನು ನಿಮ್ಮನ್ನ ಸಾಯಿಸ್ತಾ ಇದೀನಾ?

ಅಲ್ಲಪ್ಪಾ ದೊರೆ ಗಾಡಿ ಹೀಗೆ ರ್‍ಯಾಷ್ ಆಗಿ ಓಡಿಸಿದರೆ ಅಪಘಾತಗಳು ಆಗುತ್ತೆ.....

ಮೆಲ್ಲಗೆ ಓಡಿಸಿದರೆ ಜೋರಾಗಿ ಹೋಗು ಅಂತೀರಿ, ಜೋರಾಗಿ ಹೋದರೆ ಮೆಲ್ಲಗೆ ಅಂತೀರೀ....

ಇವನ ಮಾತಿನ ಧಾಟಿ ಯಾರಿಗೆ ಕೋಪ ಬರಿಸಲ್ಲ ಹೇಳಿ?

ಅಯ್ಯಾ ದೊರೆ ನಿನಗೆ ಎರಡೇ ರೀತೀನ ಗಾಡಿ ಓಡಿಸೋಕ್ಕೆ ಬರೋದೂ? ಅಂತ ಅಮರಿದೆವು. ಸ್ವಲ್ಪ ಸರಿ ಹೋದ ಹಾಗೆ ತೋರಿಸಿಕೊಂಡ.

ಫಾಲ್ಸ್ ಹತ್ತು ಕಿಮೀ ಇದೆ ಅನ್ನ ಬೇಕಾದರೆ ಆರು ಕಿಲೋಮೀಟರು ಹೋಗ್ತಾ ಆರು ಕಿಲೋಮೀಟರು ಬರ್ತಾ ನಡೀಬೇಕಾಗ್ತೈತೆ... ಅಂದರೆ ಹನ್ನೆರೆಡು ಕಿಲೋಮೀಟರು ಅಂತ ಗುಣಗುಣಿಸಿದ. ಎಲ್ಲಾ ಗಾಡಿ ಎಲ್ಲಿ ನಿಲ್ಲುತ್ತೋ ಅಲ್ಲಿ ನಿಲ್ಸು.... ಎಲ್ಲರೂ ಎಷ್ಟು ನಡೀತಾರೋ ನಾವೂ ಅಷ್ಟೇ ನಡೀತೀವಿ.......

ಚಾಲಕನಿಗೆ ಬೇರೆ ದಾರಿ ಕಾಣಿಸದೇ ವಾಹನ ಓಡಿಸಿದ.

ಫಾಲ್ಸಿಗೆ ಅರ್ಧ ಕಿಮೀ ದೂರದಲ್ಲಿ ಮಿಕ್ಕ ಗಾಡಿಗಳು ನಿಂತ ಜಾಗದಲ್ಲಿ ಈ ಗಾಡಿಯೂ ನಿಲ್ತು. ಚಾಲಕ ನಮಗೆ ಮೋಸ ಮಾಡಕ್ಕೆ ಹೊರಟಿದ್ದ ಅನ್ನುವುದು ನಮಗೆ ಖಾತರಿಯಾಯ್ತು.

ಫಾಲ್ಸ್ ನೋಡಿಕೊಂಡು ಬಂದೆವು. ಅಲ್ಲಿಂದ ಮಾತು ಆಡಿದ ಹಾಗೆಯೇ ನಮ್ಮ ಇಡೀ ದಿವಸದ ಕಾರ್ಯಕ್ರಮ ಮುಗಿಸಿಕೊಂಡೆವು.

ಹೋಟೆಲ್ಲಿನ ಹತ್ತಿರ ಅವನು ನಮ್ಮನ್ನು ಬಿಟ್ಟು ಹೊರಡಬೇಕು, ಅವನಿಗೆ ಇನಾಮು ಕೊಡಲು ನಮಗೆ ಯಾರಿಗೂ ಇಷ್ಟವೇ ಇಲ್ಲ.....

ಅವನು ನಾವೆಲ್ಲಾ ಇಳಿದ ನಂತರ ಗಾಡಿ ಸ್ಟಾರ್ಟ್ ಮಾಡುವ ಮುನ್ನ ಇಲ್ಲಿ ಬನ್ರೀ ಸಾಹೇಬ್ರೇ ಅಂತ ಕೂಗಿದೆ.

ನೋಡ್ರೀ ನಾವು ಊರು ನೋಡಕ್ಕೆ ಅಂತ ಬರ್ತೀವಲ್ಲಾ ನಾವು ನಿಮ್ಮೂರಲ್ಲಿ ಭೇಟಿಯಾಗೋ ಜನಗಳು ತುಂಬಾ ಕಮ್ಮಿ. ಇವತ್ತು ನೋಡಿ ಪೂರ್ತಿ ದಿವಸ ನಿಮ್ಮ ಜತೇಲೇ ಇದ್ದೆವು. ಅಂದರೆ ನಿಮ್ಮ ಊರಿನಲ್ಲಿ ನಾವು ಯಾರನ್ನೂ ನೋಡಲೇ ಇಲ್ಲ...

ಆತ ತಲೆ ಆಡಿಸಿದ.

ಅಂದರೆ ನಾವು ನಿಮ್ಮ ಒಬ್ಬರನ್ನೇ ನಿಮ್ಮ ಊರಿನಲ್ಲಿ ಇವತ್ತು ನೋಡಿದ್ದು.........

ಏನು ಹೇಳಕ್ಕೆ ಹೊರಟಿದ್ದೀನಿ ಅಂತ ಅವನು ಗಲಿಬಿಲಿಗೊಂಡಿರುವುದು ಕಾಣಿಸುತ್ತಿತ್ತು.

ನಿಮ್ಮ ಊರಲ್ಲಿ ನಿಮ್ಮಂಥೋರು ಇದೀರಲ್ಲಾ ಅವರೇ ನಿಮ್ಮ ಊರನ್ನ ಪ್ರತಿನಿಧಿಸುವವರು. ಗೊತ್ತಾಗ್ತಾ ಇದೆಯಾ ನಾನು ಹೇಳ್ತಿರೋದೂ...?

ಈಗಲೂ ತಲೆಯಾಡಿಸಿದ.

ನಾವು ಊರಿಗೆ ಹೋದಮೇಲೆ ನಿಮ್ಮನ್ನೇ ನೆನೆಸಿಕೊಳ್ಳೋದು. ಈ ಊರು ನೆನಪಿಗೆ ಬಂದರೆ ನೀವೇ ನೆನಪಾಗೋದು?

ಈಗಲೂ ತಲೆಯಾಡಿಸಿದ.

ನೋಡಿ ನೀವುಗಳು ಸರಿಯಾಗಿ ಜನರ ಹತ್ತಿರ ಬಿಹೇವ್ ಮಾಡ್ಬೇಕು. ನಿಮ್ಮ ಒಬ್ಬರಿಂದ ಇಡೀ ಊರಿನ ಹೆಸರು ಕೆಡಬಾರದು. ಬೆಳಿಗ್ಗೆಯಿಂದ ನಿಮ್ಮ ಬಿಹೇವಿಯರು ನೆನೆಸಿಕೊಳ್ಳಿ....

ಕಸ ತುಂಬಿದ್ದ ಗಾಡಿ, ಅದೂ ಬಂದಿದ್ದು ತಡ, ಅದರ ಜತೆಗೆ ನಿಮ್ಮ ಅವತಾರ, ಅಲ್ರೀ ಹಾಗೆ ದಾರಿ ಉದ್ದಕ್ಕೂ ನೀವು ಎಲೆ ಅಡಿಕೆ ಜಗೀತಾ ಆಚೆ ಉಗೀತಾ ಬಂದರೆ ಒಳಗೆ ಕೂತೋರಿಗೆ ಹೇಗಿರುತ್ತೆ? ಅದಕ್ಕೆ ಸೇರಿಸಿದ ಹಾಗೆ ಸುಮ್‌ಸುಮ್ನೆ ದೂರ ನಡೀಬೇಕು ಅಂತ ಹೆದರಿಸಿದ್ದು... ನಾವು ಹೋಗೋದನ್ನ ತಡೆಯೋದು ಅಂದರೆ ನೀವು ಪೆಟ್ರೋಲು ಮಿಗಿಸೋದು ಹಾಗೂ ದುಡ್ಡು ಗಿಟ್ಟಿಸೋದು...... ಇವೆಲ್ಲಾ ಬೇರೆ ಊರಿನಿಂದ ಬಂದೋರಿಗೆ ಒಂದು ರೀತಿ ಕೆಟ್ಟ ಅಭಿಪ್ರಾಯ ಬೀರುತ್ತೆ... ಇದೆಲ್ಲಾ ಏನು ಪ್ರಭಾವ ಬೀರುತ್ತೆ ಗೊತ್ತಾ?

ನಿಮ್ಮಂಥೋರು ಒಬ್ಬರೋ ಇಬ್ಬರೋ ಮಾಡೋ ಕೆಲಸ ಇಡೀ ಊರಿನವರ ಬಗ್ಗೆ ಕಳ್ಳರು ಕೆಟ್ಟವರು ಕಿಡಿಗೇಡಿಗಳು ಅನ್ನೋ ಅಭಿಪ್ರಾಯ ಮೂಡಿಸತ್ತೆ. ಆಗ ನಮ್ಮಂಥೋರು ನಿಮ್ಮೂರಿಗೆ ಬರೋದು ನಿಲ್ಲಿಸ್ತಾರೆ....... ನಿಮ್ಮ ಆದಾಯ ಹೋಗಿಬಿಡುತ್ತೆ, ಹೆಂಡತಿ ಮಕ್ಕಳನ್ನ ಬಿಟ್ಟು ನೀವು ನಗರಕ್ಕೆ ಅನ್ನ ಹುಡುಕಿ ಬರಬೇಕಾಗುತ್ತೆ........

ಅಂತ ಉಪದೇಶ ನೀಡಿ ಟಿಪ್ಸನ್ನೂ ಕೊಟ್ಟು ಒಂದು ಸಲಾಂ ಗಿಟ್ಟಿಸಿದೆ. ಅಲ್ಲ ನೀನು ಕತೆ ಬಿಟ್ಟೆ ಅಂತ ಅವರು ಸರಿ ಹೋಗ್ತಾರೇನೂ ಅಂತ ಕೇಳಿದರು ನನ್ನ ಬಂಧು.

ಊದೋ ಶಂಖ ಊದಿಬಿಡಬೇಕು....... ಅಂದೆ! ಸರಿ ಅಲ್ವಾ?

✷

## ಆಟ

ಜನ ತುಂಬಾ ಇಷ್ಟಪಡುತ್ತಾರೆ ಕ್ರಿ
ಕೆಟ್ಟಾಟ
ಚೆಂಡು ದಾಂಡುಗಳ ಹೊಡೆದಾಟ ಬಡಿದಾಟ
ಆಡಿಸಿದವರೇ ಆಡಿದರು ಕ್ರಿ
ಕೆಟ್ಟಾಟ
ಜನರಿಗೆ ಗೊತ್ತಿರಲಿಲ್ಲ
ಆಟ ಕ್ರಿಕೆಟ್ಟು
ಹೋಗುತ್ತದೆ ಇಷ್ಟೊಂದು ಕೆಟ್ಟು

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಬಾಕು 3. ಅನನುಭವಿ 5. ಪದವಿ 7. ವಾಸಸ್ಥಾನ 10. ನನಸು 11. ಅನುಬಂಧ 12. ರಜನಿ 15. ಸಮಯೋಚಿತ 16. ಗಣ

**ಮೇಲಿಂದ ಕೆಳಕ್ಕೆ**

2. ಕುರೂಪ 3. ಅತ್ತೆ 4. ವಿಮಾನ 6. ವಿಧಾನಸೌಧ 7. ವಾರಸುದಾರ 8. ಸ್ಥಾಪಕ 9. ಕಮಾನು 11. ಅಗಸ 13. ನಿಯೋಗ 14. ಮತ

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್ಎ

## ಆ ಅಳಿಯ ಈ ಅಳಿಯ

**ಈ**ಗೀಗ ಅಳಿಯಂದಿರೂ ಸುದ್ದಿ ಮಾಡುತ್ತಿದ್ದಾರೆ. ತಮ್ಮ ಅತ್ತೆ ಮಾವಂದಿರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಲು. ಅತ್ತ ಉತ್ತರ ಭಾರತದಲ್ಲಿ ಭಾರತದ ನಂಬರ್ 1 ಅಳಿಯ ವಾಡ್ರ ಭಾರತದ ನಂಬರ್ 1 ಅತ್ತೆ ಸೋನಿಯಾ ಗಾಂಧಿಗೆ ಮುಜುಗರ ಉಂಟು ಮಾಡಿದ್ದರೆ ಇತ್ತ ದಕ್ಷಿಣ ಭಾರತದಲ್ಲಿ ದೇಶದ ನಂಬರ್ 1 ನಾನ್ ಕ್ರಿಕೆಟ್ ಆಟಗಾರ ಶ್ರೀನಿವಾಸನ್ ಅವರ ಅಳಿಯ ಮೈಯಪ್ಪನ್ ಕ್ರಿಕೆಟ್ ಮೈದಾನದಲ್ಲಿ ಹೆಚ್ಚು ಮೇಯುವ ಉತ್ಸಾಹದಲ್ಲಿ ಮಾವನನ್ನು ಪೇಚಿಗೆ ದೂಡಿದ್ದಾರೆ. ಈ ಮಧ್ಯೆ ಬಿಹಾರದಲ್ಲಿ ಮುಖ್ಯ ಮಂತ್ರಿಗಳು ತಮ್ಮ 'ಎಲ್ಲ' ವ್ಯವಹಾರಗಳು ಸುಗಮವಾಗಿ ನಡೆಸುವ ಏಕೈಕ ಉದ್ದೇಶದಿಂದ ತಮ್ಮ ಖಾಸಾ ಅಳಿಯನನ್ನೇ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ಆದರೆ ಈ ಗೊಂದಲಗಳ ನಡುವೆ ನೆಹರೂಜಿ ಅವರ ಅಳಿಯ ಫಿರೋಜ್ ಗಾಂಧಿ ಅವರತ್ತ ಗಮನ ಹರಿಸುವುದು ಚಲೋ ಅನಿಸುತ್ತೆ. ಈ ಅಳಿಯ ಪ್ರಧಾನಿಯಾಗಿದ್ದ ತಮ್ಮ ಮಾವನನ್ನೇ ಎದುರುಹಾಕಿಕೊಳ್ಳಲು ಹಿಂಜರಿಯದೆ ಅವರ ಸಹೋದ್ಯೋಗಿ ಟಿಟಿಕೆ ಅವರ ಅವ್ಯವಹಾರವನ್ನು ಲೋಕಸಭೆಯಲ್ಲೇ ಬಯಲು ಮಾಡಿ ನೆಹರೂರವರನ್ನು ಚಕಿತಗೊಳಿಸಿದ್ದರು. ಟಿಟಿಕೆ ರಾಜೀನಾಮೆ ನೀಡಿದರು. ಅಂದಹಾಗೆ ಫಿರೋಜ್ ಮಗ ರಾಜೀವ್ ಗಾಂಧಿ. ವಾಡ್ರ ರಾಜೀವ್ ಅವರ ಅಳಿಯ. ಆದರೆ ಎತ್ತಣ ಫಿರೋಜ್, ಎತ್ತಣ ವಾಡ್ರ..

★★★

## ಫ್ರೀ (ಡ್ರಿಂಕ್) ಫಾರ್ ಆಲ್

**ಸ**ಡನ್ನಾಗಿ ಕರೆದರೆ ಸ್ವರ್ಗಕ್ಕೂ ಯಾರೂ ಬರುವುದಿಲ್ಲ ಎಂದು ನೀವು 'ತುಂತುರು' ಅಂಕಣದಲ್ಲಿ ಕಳೆದ ತಿಂಗಳು ಓದಿರಬಹುದು. ಆದರೆ ಗುಂಡು ಪಾರ್ಟಿ ಇದೆ ಎಂದರೆ ಸಡನ್ನಾಗಿ ಕರೆದರೂ ಜನ ಬರುವುದಿಲ್ಲವೆ? ಬಂದೇ ಬರುತ್ತಾರೆ, ಬರಿಗೈಲಿ ಅಲ್ಲ, ಬಿಂದಿಗೆ, ಬಕೆಟ್, ಟಬ್, ಕೊಳದಪ್ಪಲೆ, ಮಗ್, ಡಬ್ಬ.. ಹೀಗೆ ಕೈಗೆ ಏನು ಸಿಕ್ಕಿತೋ ಅದನ್ನು ಹಿಡಿದು ಬರುತ್ತಾರೆ. ಅಥವಾ ಬಂದರು. ಅರೆ! ಪಾರ್ಟಿಗೆ ಬನ್ನಿ ಎಂದರೆ ಹೀಗೆ ಬರುವುದೆ? ಕುಡಿದೂ ಹೋದ ಕೊಂಡೂ ಹೋದ ಎನ್ನುವಂತೆ. ಆದರೆ ಇದು ರೋಡ್ ಸೈಡ್ ಪಾರ್ಟಿ ಸ್ವಾಮಿ. ಫ್ರೀ (ಡ್ರಿಂಕ್) ಫಾರ್ ಆಲ್. ಬೇಕಿದ್ದಷ್ಟು ಕುಡಿಯಿರಿ, ಸಾಕಷ್ಟು ಕೊಂಡೊಯ್ಯಿರಿ ಎಂಬುದೇ ಆಫರ್. ಉತ್ತರ ಪ್ರದೇಶದ ಬರೈಲಿ ಬಳಿ ಬೀರ್ ಕೊಂಡೊಯ್ಯುತ್ತಿದ್ದ ಲಾರಿಯೊಂದು

ಉರುಳಿದಾಗ ಸುತ್ತಮುತ್ತಲಿನ ಜನ ಡ್ರೈವರ್ ಮತ್ತು ಸಹಾಯಕನನ್ನು ರಕ್ಷಿಸಿದ ಮೇಲೆ ಬೀರ್ ಬಾಟಲಿಗೆ ಕೈ ಹಾಕಿದರು, ಅಲ್ಲಲ್ಲ ಬಾಯಿ ಹಾಕಿ ಪಾರ್ಟಿ ಶುರು ಮಾಡಿದರು. ನಂತರ ಮೊಬೈಲ್ ಮೂಲಕ ತಮ್ಮ ಫ್ಯಾಮಿಲಿ ಮತ್ತು ಫ್ರೆಂಡ್ಸ್‌ಗಳನ್ನು ಆಹ್ವಾನಿಸಿದರು. ಅದೂ ಎಂತಹ ಬೀರ್? ಆರ್ಡಿನರಿ ಅಲ್ಲ ಸ್ಪೆಷಲ್ ಫಾರಿನ್ ಮಾಲು. ಜಮಾಯಿಸಿದ ಜನ ಕುಡಿದು ತೇಗಿದರು, ಸಂಭ್ರಮಿಸಿದರು, ಸುಖದಲ್ಲಿ ತೇಲಾಡಿದರು. ನಾಳೆಗೂ ಇರಲಿ ಎಂದು ಕೊಂಡೊಯ್ದರು. ಪೋಲೀಸರು ಮಾಮೂಲಿನಂತೆ ನಂತರ ಬಂದರು. ಅವರೂ ಪಾರ್ಟಿ ಮಾಡಿ ನಂತರ ತನಿಖೆ ಶುರುಮಾಡಿರಬೇಕು.

★★★

## ದೇವರ ಕೆಲಸ

**ಒಂ**ದು ನ್ಯೂಯಾರ್ಕಿನ ಅಧ್ಯಯನದ ಪ್ರಕಾರ ಯಾವ ಕಚೇರಿಯಲ್ಲಿ ಗಲೀಜು ಹೆಚ್ಚು ಇರುತ್ತದೆಯೋ ಅಲ್ಲಿ ಅದಕ್ಷತೆ ಹೆಚ್ಚು ಇರುತ್ತದಂತೆ. ಆವರಣ ಚೊಕ್ಕವಾಗಿಲ್ಲದಿದ್ದರೆ ನೌಕರರ ಮೂಡ್ ಕೆಟ್ಟು ಕೆಲಸ ಮಾಡಲು ಸಾಧ್ಯವಾಗದು ಎಂದು ಆ ಅಧ್ಯಯನ ಹೇಳಿದೆ. ಆದರೆ ನಮ್ಮ ಸರ್ಕಾರಿ ಕಚೇರಿಗಳು ಲಕ ಲಕ ಹೊಳೆಯದು ನಿಜ ಆದರೆ ಮಾಮೂಲು ನೀಡಿದರೆ ದಕ್ಷತೆ ತಕ್ಷಣ ಹೆಚ್ಚಾಗುತ್ತದೆ. ಇದು ಏಕೆ? ಹೇಗೆ? ಎಂದು ಯಾರಾದರೂ ಅಧ್ಯಯನ ಮಾಡಬೇಕಲ್ಲವೆ? ಹಾಗಾಗಿ ಅಟ್‌ಲೀಸ್ಟ್ ಭಾರತದಲ್ಲಿ ಚೊಕ್ಕಟವಾಗಿರುವುದಕ್ಕೂ ದಕ್ಷತೆಗೂ ಏನೂ ಸಂಬಂಧವಿಲ್ಲ ಎಂದು ಹೇಳಬಹುದು. 'ದೇವರ ಕೆಲಸ' ಮಾಡುವ (?) ನಮ್ಮ ಸರ್ಕಾರಿ ನೌಕರರ ಜೇಬು ಗಿಂಬಳದಿಂದ ತುಂಬಿದ್ದರೆ ಸಾಕು ಎಷ್ಟೇ ಗಲೀಜಿದ್ದರೂ ಫೈಲ್‌ಗಳು ಓಡಾಡುತ್ತವೆ.

★★★

## ಭಾರಿ ಕೇಕ್

**ಟೂ** ಮೆನಿ ಕುಕ್ಸ್ ಸ್ಪಾಯಿಲ್ ದಿ ಬ್ರಾತ್ ಎನ್ನುತ್ತಾರೆ. ಅಂದರೆ ಅಡಿಗೆಯವರ ಸಂಖ್ಯೆ ಹೆಚ್ಚಿದಷ್ಟೂ ರುಚಿ ಕೆಡುವ ಸಂಭವ ಹೆಚ್ಚು. ಆದರೆ 100ಕ್ಕೂ ಹೆಚ್ಚು ಮಂದಿ ಸೇರಿ ಕ್ರಿಸ್‌ಮಸ್ ಕೇಕ್ ಮಾಡಲು ಹೊರಟರೆ ಏನಾಗಬಹುದು? ತಿಂದು ನೋಡಿ ಹೇಳಿ ಎನ್ನಬಹುದಷ್ಟೆ. ಚೆನ್ನೈನಲ್ಲಿ 100ಕ್ಕೂ ಹೆಚ್ಚು ಮಂದಿ ಕೇಕ್ ಪರಿಣಿತರು ಸೇರಿ ಅಂತಹ ಒಂದು ಭಾರಿ ಕೇಕ್ ತಯಾರಿಸುತ್ತಿದ್ದಾರಂತೆ. ಈ ಸುದ್ದಿಯನ್ನು ಇಲ್ಲಿ ನೀವು ಓದುವ ಹೊತ್ತಿನಲ್ಲೂ ಆ ಕೇಕ್ ಬೇಕ್ ಆಗುತ್ತಿರುತ್ತದೆ. ಆದುದರಿಂದ ಆ ಕೇಕ್ ಹೇಗಿತ್ತು ಎಂದು ಹೇಳಲು ಈಗಲೇ ಸಾಧ್ಯವಿಲ್ಲ. ಆದರೆ ಅನೇಕ ಕೇಕ್ ಪ್ರಿಯರ ಬಾಯಿನಲ್ಲಿ ನೀರೂರುತ್ತಿರುವುದಂತೂ ನಿಜ.

✶